ಮುಂದುವರೆದು, ಅ.ನಂ.1 ರ ಅನ್ವಯಿಕ ತಳಿಶಾಸ್ತ್ರ ವಿಭಾಗದಲ್ಲಿ ಇಬ್ಬರು ಸಹಾಯಕ ಪ್ರಾಧ್ಯಾಪಕರು ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ ಸದರ ವಿಭಾಗದಲ್ಲಿ ಅಧ್ಯಯನ ಮಾಡಲು (ಎಂ.ಎಸ್ಸಿ)ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ, ವಿಭಾಗದಲ್ಲಿ ಬೋಧನಾ ಮತ್ತು ಸಂಶೋಧನಾ ಕಾರ್ಯ ಜಾರಿಯಲ್ಲಿರುವುದರಿಂದ ವಿಭಾಗದ ಜವಾಬ್ದಾರಿ ನಿಭಾಯಿಸಲು ಒಬ್ಬರು ಮುಖ್ಯಸ್ಥರ ಅವಶ್ಯಕತೆ ಇರುವುದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, 34(5) (7) (8) ಹಾಗೂ ಅಧಿನಿಯಮ 15 (5) ರ ಪ್ರಕಾರ ಮಾನ್ಯ ಕುಲಪತಿಗಳು ಸಿಂಡಿಕೇಟ ಪರವಾಗಿ ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಖಾಯ ಇವರನ್ನು ವಿಭಾಗದ ಪದನಿಮಿತ್ತ ಮುಖ್ಯಸ್ಥರೆಂದು ನೇಮಕ ಮಾಡಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

| ಅ.ನಂ. | ವಿಭಾಗ | ವಿಭಾಗದ ಮುಖ್ಯಸ್ಥರು (ಈ ಮೊದಲಿನ) | ಮುಖ್ಯಸ್ಥರ ಅವಧಿ ಕೊನೆಗೊಂಡ/ ನಿಯೋಜನೆ ಹೊಂದಿದ ದಿನಾಂಕ | ಪ್ರಸ್ತುತ ವಿಭಾಗದ ಮುಖ್ಯಸ್ಥರು | ನೇಮಕ ಮಾಡಿದ ದಿನಾಂಕ | ಅಧಿಸೂಚನೆ ಹೊರಡಿಸಿದ ದಿನಾಂಕ |
|---|---|---|---|---|---|---|
| 1) | ಅನ್ವಯಿಕ ತಳಿಶಾಸ್ತ್ರ | ---- | ---- | ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಖಾಯ | 02-03-2023 | 02-03-2023 |
| 2) | ಪ್ರಾಚೀನ ಭಾರತೀಯ ಇತಿಹಾಸ & ಶಾಸನಶಾಸ್ತ್ರ | ಡಾ. ಲೋಕೇಶ, ಪ್ರಾಧ್ಯಾಪಕರು | 26-03-2023 | ಡಾ. ಎಸ್.ಜಿ. ಚಲವಾದಿ, ಪ್ರಾಧ್ಯಾಪಕರು | 27-03-2023 | 23-03-2023 |
| 3) | ಅರ್ಥಶಾಸ್ತ್ರ ವಿಭಾಗ | ಡಾ. ಎಸ್. ಬಿ. ನಾರಿ, ಸಹ-ಪ್ರಾಧ್ಯಾಪಕರು | 22-02-2023 | ಡಾ. ಎಸ್. ಟಿ. ಬಾಗಲಕೋಟಿ, ಹಿ.ಪ್ರಾಧ್ಯಾಪಕರು | 23-02-23 | 23-02-2023 |
| 4) | ಅರ್ಥಶಾಸ್ತ್ರ ವಿಭಾಗ | ಡಾ. ಎಸ್. ಟಿ. ಬಾಗಲಕೋಟಿ, ಹಿ.ಪ್ರಾಧ್ಯಾಪಕರು | 17-05-2023 | ಡಾ. ಹೊನ್ನಪ್ಪ ಎಚ್. ಭರಡಿ, ಪ್ರಾಧ್ಯಾಪಕರು | 18-05-2023 | 18-05-2023 |
| 6) | ಭೂಗೋಳಶಾಸ್ತ್ರ ವಿಭಾಗ | ಡಾ. ಎ.ಎ. ಮೂಲಿಮನಿ, ಹಿ.ಪ್ರಾಧ್ಯಾಪಕರು | 13-05-2023 | ಡಾ. ಎ.ಎ. ಮೂಲಿಮನಿ, ಹಿ.ಪ್ರಾಧ್ಯಾಪಕರು | 14-05-2023 | 18-05-2023 |
| 6) | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ | ಡಾ. ಆರ್. ಆರ್. ನಾಯಕ, ಪ್ರಾಧ್ಯಾಪಕರು | 31-05-2023 | ಡಾ. ಆರ್. ಆರ್. ನಾಯಕ, ಪ್ರಾಧ್ಯಾಪಕರು | 01-06-2023 | 01-06-2023 |

26

| ಅ.ನಂ. | ವಿಭಾಗ | ವಿಭಾಗದ ಮುಖ್ಯಸ್ಥರು (ಈ ಮೊದಲಿನ) | ಮುಖ್ಯಸ್ಥರ ಅವಧಿ ಕೊನೆಗೊಂಡ/ ನಿಯೋಜನೆ ಹೊಂದಿದ ದಿನಾಂಕ | ಪ್ರಸ್ತುತ ವಿಭಾಗದ ಮುಖ್ಯಸ್ಥರು | ನೇಮಕ ಮಾಡಿದ ದಿನಾಂಕ | ಅಧಿಸೂಚನೆ ಹೊರಡಿಸಿದ ದಿನಾಂಕ |
|---|---|---|---|---|---|---|
| 7) | ಅಪರಾಧಶಾಸ್ತ್ರ & ನ್ಯಾಯ ವಿಜ್ಞಾನ ವಿಭಾಗ | ಡಾ. ಜೆ.ಎಸ್. ವೇಣುಮಾದವ, ಪ್ರಾಧ್ಯಾಪಕರು | 13-06-2023 | ಡಾ. ಜೆ.ಎಸ್. ವೇಣುಮಾದವ, ಪ್ರಾಧ್ಯಾಪಕರು | 14-06-2023 | 13-06-2023 |
| 8) | ಸಂಖ್ಯಾಶಾಸ್ತ್ರ ವಿಭಾಗ | ಡಾ(ಶ್ರೀಮತಿ). ಶಾರದಾ ಭಟ್, ಪ್ರಾಧ್ಯಾಪಕರು | 05-06-2023 | ಡಾ. ಎ.ಎಸ್. ತಳವಾಳ, ಪ್ರಾಧ್ಯಾಪಕರು | 06-06-2023 | 05-06-2023 |
| 9) | ಸಂಗೀತ ಮತ್ತು ಲಲಿತ ಕಲಾ ಅಧ್ಯಯನ ವಿಭಾಗ | ಡಾ. ಎಮ್.ಎಚ್. ಅಗಡಿ, ಪ್ರಾಧ್ಯಾಪಕರು | 30-06-2023 | ಡಾ. ಎಮ್.ಎಚ್. ಅಗಡಿ, ಪ್ರಾಧ್ಯಾಪಕರು | 01-07-2023 | 01-07-2023 |
| 10) | ಭೂವಿಜ್ಞಾನ ವಿಭಾಗ | ಡಾ. ಎ. ಶ್ರೀನಿವಾಸ, ಪ್ರಾಧ್ಯಾಪಕರು | 30-06-2023 | ಡಾ. ಎ. ಶ್ರೀನಿವಾಸ, ಪ್ರಾಧ್ಯಾಪಕರು | 01-07-2023 | 01-07-2023 |
| 11) | ಕಡಲು ಜೀವಶಾಸ್ತ್ರ ವಿಭಾಗ | ಡಾ. ಜೆ. ಎಲ್. ರಾಥೋಡ, ಪ್ರಾಧ್ಯಾಪಕರು | 30-06-2023 | ಡಾ. ಜೆ. ಎಲ್. ರಾಥೋಡ, ಪ್ರಾಧ್ಯಾಪಕರು | 01-07-2023 | 01-07-2023 |
| 12) | ರಾಜ್ಯಶಾಸ್ತ್ರ ವಿಭಾಗ | ಡಾ. ಬಿ. ಎಮ್. ರತ್ನಾಕರ, ಪ್ರಾಧ್ಯಾಪಕರು | 09-07-2023 | ಡಾ. ಬಿ. ಎಮ್. ರತ್ನಾಕರ, ಪ್ರಾಧ್ಯಾಪಕರು | 10-07-2023 | 08-07-2023 |

ಆದ್ದರಿಂದ, ಮೇಲ್ಕಾಣಿಸಿದಂತೆ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

## ಸಿಂಡಿಕೇಟ ಕಲಂ

04) **ವಿಷಯ:** ಡಾ(ಶ್ರೀಮತಿ). ಚಂದ್ರಮ್ಮ ಎಂ., ಪ್ರಾಧ್ಯಾಪಕರು, ಡೀನರು & ಸಿಂಡಿಕೇಟ ಸದಸ್ಯರು ಇವರನ್ನು ಹಣಕಾಸು ಸಮಿತಿ ಸಭೆಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು.

**ಟಿಪ್ಪಣಿ:**

ಕರ್ನಾಟಕ ಸರ್ಕಾರದ ಪತ್ರ ಕ್ರಮಾಂಕ ಇಡಿ 211 ಯುಆರ್‌ಸಿ 2023 ದಿನಾಂಕ 16.05.2023ರ ಮೂಲಕ ಡಾ. ಎಸ್.ಟಿ ಬಾಗಲಕೋಟಿ, ಪ್ರಾಧ್ಯಾಪಕರು & ಸಿಂಡಿಕೇಟ ಸದಸ್ಯರು ಇವರನ್ನು ತಾತ್ಕಾಲಿಕ ಕಾರ್ಯವ್ಯವಸ್ಥೆ ಆಧಾರದ ಮೇಲೆ ಹಾವೇರಿ ವಿಶ್ವವಿದ್ಯಾಲಯದ ಕುಲಸಚಿವರು(ಆಡಳಿತ) ಹುದ್ದೆಗೆ ನಿಯೋಜನೆ ಮಾಡಿದ ಪ್ರಯುಕ್ತ, ಸದರಿಯವರು ಕರ್ನಾಟಕ ವಿಶ್ವವಿದ್ಯಾಲಯದ ಹಣಕಾಸು ಸಮಿತಿ ಸಭೆಯ ಸದಸ್ಯರಾಗಿರುವುದರಿಂದ ಹಣಕಾಸು ಸಮಿತಿಯ ಸದಸ್ಯತ್ವವು ಕೊನೆಗೊಂಡಿರುತ್ತದೆ.

ಸದರಿಯವರಿಂದ ತೆರವಾದ ಸ್ಥಾನದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಪರಿಚ್ಛೇದ 32(1) (v) ರ ಅಡಿಯಲ್ಲಿ ಒಬ್ಬರು ಸಿಂಡಿಕೇಟ ಸದಸ್ಯರನ್ನು ಹಣಕಾಸು ಸಮಿತಿ ಸಭೆಗೆ ಸದ್ಯರನ್ನಾಗಿ ನಾಮನಿರ್ದೇಶನ ಮಾಡುವುದು ಅವಶ್ಯವಿದ್ದರಿಂದ, ಪ್ರಸ್ತುತ ಸಿಂಡಿಕೇಟ ಸದಸ್ಯರ ಯಾದಿಯ ಪ್ರಕಾರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000, ಪರಿಚ್ಛೇದ 15 (5) ರಂತೆ ಮಾನ್ಯ ಕುಲಪತಿಗಳು ಸಿಂಡಿಕೇಟ ಪರವಾಗಿ ತೆಗೆದುಕೊಂಡ ಕ್ರಮದಂತೆ, ಡಾ(ಶ್ರೀಮತಿ). ಚಂದ್ರಮ್ಮ ಎಂ., ಪ್ರಾಧ್ಯಾಪಕರು, ಡೀನರು & ಸಿಂಡಿಕೇಟ ಸದಸ್ಯರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಹಣಕಾಸು ಸಮಿತಿ ಸಭೆಯ ಸದಸ್ಯರನ್ನಾಗಿ, ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಅಥವಾ ಸದರೀಯವರು ಸಿಂಡಿಕೇಟ ಸದಸ್ಯರಾಗಿರುವವರೆಗೆ ಅಥವಾ ಮುಂದಿನ ಆದೇಶದವರೆಗೆ ಇದರಲ್ಲಿ ಯಾವುದು ಮೊದಲು ಘಟಿಸುವುದೋ ಅಲ್ಲಿಯವರೆಗೆ ಅನ್ವಯವಾಗುವಂತೆ ನಾಮನಿರ್ದೇಶನ ಮಾಡಿ ದಿನಾಂಕ 05.062023 ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಆದ್ದರಿಂದ, ಮೇಲ್ಕಾಣಿಸಿದಂತೆ ಡಾ(ಶ್ರೀಮತಿ). ಚಂದ್ರಮ್ಮ ಎಂ., ಪ್ರಾಧ್ಯಾಪಕರು, ಡೀನರು & ಸಿಂಡಿಕೇಟ ಸದಸ್ಯರು, ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ ಇವರನ್ನು ಹಣಕಾಸು ಸಮಿತಿ ಸಭೆಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ ಕ್ರಮವನ್ನು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

## ಆಡಳಿತ ಮಂಡಳಿ ಕಲಂ

05) ಡಾ.ಮನೋಜ ಡೊಳ್ಳಿ, ಪ್ರಾಧ್ಯಾಪಕರು, ಇವರನ್ನು ಅರ್ಥಶಾಸ್ತ್ರ ಅಧ್ಯಯನ ವಿಭಾಗ, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯಿಂದ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಂತರ ವಿಶ್ವವಿದ್ಯಾಲಯದ ವರ್ಗಾವಣೆ ಅಡಿ ವರ್ಗಾವಣೆಯಾಗಲು ಸಲ್ಲಿಸಿದ ದಿನಾಂಕ:03.06.2023 ರ ಸದರಿಯವರ ಮನವಿ ಪತ್ರವನ್ನು ಪರಿಶೀಲಿಸುವ ಕುರಿತು.

**ಟಿಪ್ಪಣಿ:**

ಡಾ.ಮನೋಜ ಡೊಳ್ಳಿ, ಪ್ರಾಧ್ಯಾಪಕರು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ ಇವರು ತಮ್ಮ ಪತ್ರ ದಿನಾಂಕ:03.06.2023 ರಲ್ಲಿ ತಾವು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿ, ಮೂಲತಃ ತಾವು ಧಾರವಾಡದ ರಹವಾಸಿಯಾಗಿದ್ದು, ತಮ್ಮ ವಯಸ್ಸಾದ ತಾಯಿಯೊಂದಿಗೆ ತಮ್ಮ ಚಿಕ್ಕ ಮಕ್ಕಳು ಮತ್ತು ಹೆಂಡತಿ ಧಾರವಾಡದ ರಹವಾಸಿಗಳಾಗಿರುತ್ತಾರೆ. ವಯಸ್ಸಾದ ತಾಯಿಗೆ ಬಳ್ಳಾರಿಯ ಹಾಗೂ ಕೊಪ್ಪಳ ವಾತಾವರಣಕ್ಕೆ ಹೊಂದಿಕೊಳ್ಳಲಾಗದೇ ವಯೋಸಹಜ ಕಾಯಿಲೇಗಳಿಂದ ಅನಾರೋಗ್ಯ ಪೀಡಿತರಾಗಿದ್ದು, ಶ್ರೀಮತಿಯವರು ಅಣ್ಣಿಗೇರಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತೀರುವುದರಿಂದ ತಾಯಿಯವರ ಆರೋಗ್ಯ ನೋಡಿಕೊಳ್ಳಲು ತಮ್ಮ ಅವಶ್ಯಕತೆ ತುಂಬಾ ಇರುವುದರಿಂದ ತಮ್ಮನ್ನು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯಿಂದ ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗಕ್ಕೆ ವರ್ಗಾವಣೆಹೊಂದಲು ನಿರಾಕ್ಷೇಪಣಾ ಪತ್ರ ಒದಗಿಸಿರುತ್ತಾರೆ ಎಂದು ತಿಳಿಸುತ್ತಾ ತಮ್ಮನ್ನು ಅರ್ಥಶಾಸ್ತ್ರ ವಿಭಾಗ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯಿಂದ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗಕ್ಕೆ ವರ್ಗಾವಣೆಯಾಗಲು ನಿರಾಕ್ಷೇಪಣಾ ಪ್ರಮಾಣ ಪತ್ರ ಒದಗಿಸಿಕೊಟ್ಟು ಮತ್ತು ಕರ್ನಾಟಕ ಸರ್ಕಾರಕ್ಕೆ ತಮ್ಮ ಮನವಿಯನ್ನು ಸಮುಚಿತ ಮಾರ್ಗದಲ್ಲಿ ನಿರಾಕ್ಷೇಪಣಾ ಪ್ರಮಾಣ ಪತ್ರದೊಂದಿಗೆ ಸಲ್ಲಿಸಲು ವಿನಂತಿಸಿಕೊಂಡಿರುತ್ತಾರೆ.

ಮುಂದುವರೆದು, ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಇಲ್ಲಿ ದಿನಾಂಕ:24.12.2022 ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಡಾ.ಮನೋಜ ಡೊಳ್ಳಿ, ಪ್ರಾಧ್ಯಾಪಕರು, ಇವರನ್ನು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ, ಬಳ್ಳಾರಿಯಿಂದ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡಕ್ಕೆ ಅಂತರ ವಿಶ್ವವಿದ್ಯಾಲಯದ ಹುದ್ದೆರಹಿತವಾಗಿ ವರ್ಗಾವಣೆಗೊಳ್ಳಲು ಸದರಿಯವರು ದಿನಾಂಕ:21.012.2022 ರ ಮನವಿ ಬಗ್ಗೆ ಚರ್ಚಿಸಿ, ಡಾ.ಮನೋಜ ಡೊಳ್ಳಿ ಇವರನ್ನು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಇಲ್ಲಿಂದ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡಕ್ಕೆ ಹುದ್ದೆ ರಹಿತವಾಗಿ ವರ್ಗಾವಣೆಗೊಳ್ಳಲು ವಿಶ್ವವಿದ್ಯಾಲಯದಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ನೀಡಿರುತ್ತಾರೆ.

ಸದರ ವಿಷಯವಾಗಿ, ನೌಕರರ ಅಂತರ ವಿಶ್ವವಿದ್ಯಾಲಯ ವರ್ಗಾವಣೆ ಕುರಿತಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಅಧ್ಯಾಯ-9, ಪರಿಚ್ಛೇದ 58 ರಲ್ಲಿ ಈ ಕೆಳಗಿನಂತೆ ವಿವರಿಸಲಾಗಿರುತ್ತದೆ.

### ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000

"58. ತಾತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕರಾರು, ಒಪ್ಪಂದ, ಅಥವಾ ಯಾವುದೇ ಇತರ ಕಾನೂನಿನಲ್ಲಿ ಮತ್ತು ವಿಶ್ವವಿದ್ಯಾನಿಲಯದ ನೌಕಕರರಿಗೆ ಅನ್ವಯವಾಗುವ ಸೇವಾ ಷರತ್ತುಗಳಲ್ಲಿ ಏನೇ ಇದ್ದಾಗ್ಯೂ, ಕುಲಾಧಿಪತಿಯು, ರಾಜ್ಯ ಸರ್ಕಾರದೊಡನೆ ಸಮಾಲೋಚಿಸಿ, ಆಡಳಿತಾತ್ಮಕ ಕಾರಣಗಳಿಗಾಗಿ ವಿಶ್ವವಿದ್ಯಾಲಯದಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಿರುವ ಯಾವನೇ ವ್ಯಕ್ತಿಯನ್ನು, ಈ ಅಧಿನಿಯಮದ ತತ್ಕಾಲದಲ್ಲಿ ಜಾರಿಯಲ್ಲಿರುವ ರಾಜ್ಯ ವಿಧಾನಮಂಡಲವು ರಚಿಸಿದ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಾಪಿಸಲಾದ ಯಾವುದೇ ಇತರ ವಿಶ್ವವಿದ್ಯಾಲಯಕ್ಕೆ ವರ್ಗಾಯಿಸಬಹುದಾದ ಮತ್ತು ಹಾಗೆ ವರ್ಗಾಯಿತನಾದ ವ್ಯಕ್ತಿಯು, ಯಾವ ವಿಶ್ವವಿದ್ಯಾಲಯಕ್ಕೆ ಅವನನ್ನು ವರ್ಗಾಯಿಸಲಾಗಿದೆಯೋ ಆ ವಿಶ್ವವಿದ್ಯಾಲಯಕ್ಕೆ, ವರ್ಗಾವಣೆಯ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸೇವಾ ಷರತ್ತುಗಳೊಂದಿಗೆ ಹೋಗತಕ್ಕದ್ದು, ವರ್ಗಾವಣೆಯಾದ ಮೇಲೆ ಅಂಥ ವ್ಯಕ್ತಿಯು ಅವನು ವರ್ಗಾವಣೆಯಾದ ವಿಶ್ವವಿದ್ಯಾಲಯದ ಸಕ್ಷಮ ಪ್ರಾಧಿಕಾರದಿಂದ ನೇಮಕಗೊಂಡಿರುವುದಾಗಿ ಭಾವಿಸತಕ್ಕದ್ದು".

ಆದುದರಿಂದ, ಡಾ.ಮನೋಜ ಡೊಳ್ಳಿ, ಪ್ರಾಧ್ಯಾಪಕರು, ಇವರನ್ನು ಅರ್ಥಶಾಸ್ತ್ರ ಅಧ್ಯಯನ ವಿಭಾಗ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿಯಿಂದ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಂತರ ವಿಶ್ವವಿದ್ಯಾಲಯದಡಿ ವರ್ಗಾವಣೆ ಅಡಿ ವರ್ಗಾವಣೆಯಾಗಲು ಸಲ್ಲಿಸಿದ ದಿನಾಂಕ:03.06.2023 ರ ಮನವಿ ಪತ್ರವನ್ನು ಆಡಳಿತ ಮಂಡಳಿಯ ಪರಿಶೀಲನೆಗಾಗಿ ಮಂಡಿಸಲಾಗಿದೆ.

## SYNDICATE ITEM

06 **Subject:** Ratification of the action taken by the Hon`ble Vice-Chancellor for having permitted to *Dr. Mallikarjun Patil,* Professor, P G Department of Studies in ***English,*** K.U. Dharwad to visit his daughter's family at America from ***10th July to 24th July 2023.***

**NOTE:**

*Dr. Mallikajun Patil,* Professor, P G Department of Studies in ***English,*** K U Dharwad in his letter dated: 19.05.2023, has stated that, he would like to visit his daughter's family at America. In this connection, he has requested to permit him to visit America from ***10.07.2023 to 24.07.2023.*** He has forwarded his requisition letter through the Chairman, P.G. Department of Studies in English, K. U. Dharwad.

***Dr. Mallikarjun Patil*** has submitted the duly certified filled in prescribed proforma issued under this ***Office Circular No.656, Dated:17.05.2017*** as per the directions received from the ***Principal Secretary, Department of Education (Education Higher), Bangalore under letter No.ED 178 UNE 2016, Dated:17.04.2017.***

It is submitted here that, as per ***Syndicate Resolution No.47*** held on ***09.05.2009/ 23.06.2009, Hon`ble Vice-Chancellor*** has been authorized to permit Faculty Member to go abroad on Exchange Programs/MOU's and other short visits (Conference etc,) under unassigned grants and the same is to be placed before Syndicate for perusal.

Accordingly, as per orders of the Hon'ble Vice-Chancellor Dated: 08.06.2023, ***Dr.Mallikarjun Patil,*** Professor, P G Department of Studies in ***English,*** K U Dharwad has been permitted to visit America from ***10.07.2023 to 24.07.2023*** and sanctioned ***EL*** for 15 days without any financial commitment on the part of the University vide this ***Office letter No.KU/DPAR/T-4/2023/542 Dated: 14.06.2023.***

Hence, the action taken by the Hon`ble Vice-Chancellor for having permitted to ***Dr. Mallikarjun Patil,*** Professor, P G Department of Studies in ***English,*** K U Dharwad to visit his daughter's family at America from ***10th July to 24th July 2023.*** is placed before the Syndicate for its ratification.

# ITEM FOR SYNDICATE

07) Ratification of the action taken by the Hon'ble Vice-Chancellor for having relieved Dr.R.R.Biradar, Professor, P.G. Dept. of Economics, Karnatak University, Dharwad so as to enable him to assume the office of the Registrar of Central University of Karnataka, Kalaburagi as per CUK Order dated:30.06.2023.

**NOTE :**

As per Central University of Karnataka, Kalaburagi Order No:CUK/Recruitment/F02/2023-34/42 dated:30.06.2023 Dr.R.R.Biradar, Professor, P.G. Dept. of Economics, Karnatak University, Dharwad has been appointed as Registrar of Central University of Karnataka, Kalaburagi for a period of five years or date of retirement in parent organization whichever is earlier. Further, Dr. Dr.R.R.Biradar, Professor vide his letter dated:01.07.2023 has requested to relieve him from the duties of the Department of Economics, Karnatak University, Dharwad and permit him to join for duty as Registrar of Central University of Karnataka, Kalaburagi.

In view of order of Central University of Karnataka and by the direction of the Hon'ble Vice-Chancellor, Dr.R.R.Biradar, Professor, P. G. Dept. of Economics, Karnatak University, Dharwad has been relieved from his duties on 03.07.2023 after office hours subject to ratification by the Syndicate, so as to enable him to assume the office of the Registrar of Central University of Karnataka, Kalaburagi and was directed to hand over the charge of Professor to Chairman, P.G. Dept. of Economics, Karnatak University under intimation to this Office

Hence, action taken by the Hon'ble Vice-Chancellor for having relieved Dr.R.R.Biradar, Professor, P. G. Dept. of Economics Karnatak University, Dharwad from his duties on 03.07.2023 after office hours, so as to enable him to assume the office of the Registrar of Central University of Karnataka, Kalaburagi as per CUK Order No:CUK/Recruitment/F02/2023-34/42 dated:30.06.2023 is placed before the Syndicate for ratification.

31

# ಸಿಂಡಿಕೇಟ್ ಸಭೆ ಕಲಂ

08

ದಿನಾಂಕ: 17.02.2023 ರಂದು ಜರುಗಿದ ಆಡಳಿತ ಮಂಡಳಿಯ ನಿರ್ಣಯ ಸಂಖ್ಯೆ 09ರ ಪ್ರಕಾರ ವಲಯ ಅರಣ್ಯ ಅಧಿಕಾರಿ, ಉಪ ವಲಯ ಅರಣ್ಯ ಅಧಿಕಾರಿ, ಅರಣ್ಯ ರಕ್ಷಕ ಹಾಗೂ ಅರಣ್ಯ ವೀಕ್ಷಕ ತರಬೇತಾರ್ಥಿಗಳಿಗೆ PG Diploma / Diploma / Certificate Course ಗಳಿಗೆ ಈಗಾಗಲೇ ನಿಗದಿಪಡಿಸಿದ ಶುಲ್ಕಗಳ ಹೊರತಾಗಿ ಇತರೆ ಶುಲ್ಕಗಳಾದ ಅರ್ಹತಾ ಪ್ರಮಾಣ ಪತ್ರ, ಉತ್ತೀರ್ಣ ಪ್ರಮಾಣ ಪತ್ರ, ಘಟಿಕೋತ್ಸವ ಪ್ರಮಾಣ ಪತ್ರ ಶುಲ್ಕ ಮುಂತಾದ ವಿಷಯಗಳಿಗೆ ಶುಲ್ಕವನ್ನು ನಿಗದಿಪಡಿಸುವ ವಿಷಯವನ್ನು ಕುರಿತು ಸದರಿ ನಿರ್ಣಯವನ್ನು ಮರುಪರಿಶೀಲಿಸುವ ಕುರಿತು.

**ಟಿಪ್ಪಣಿ:**

ದಿನಾಂಕ: 17.02.2023 ರಂದು ಜರುಗಿದ ಆಡಳಿತ ಮಂಡಳಿಯ ನಿರ್ಣಯ ಸಂಖ್ಯೆ 09ರ ಪ್ರಕಾರ ವಲಯ ಅರಣ್ಯ ಅಧಿಕಾರಿ, ಉಪ ವಲಯ ಅರಣ್ಯ ಅಧಿಕಾರಿ, ಅರಣ್ಯ ರಕ್ಷಕ ಹಾಗೂ ಅರಣ್ಯ ವೀಕ್ಷಕ ತರಬೇತಾರ್ಥಿಗಳಿಗೆ PG Diploma / Diploma / Certificate Course ಗಳಿಗೆ ಈಗಾಗಲೇ ಈ ಕೆಳಗಿನಂತೆ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ.

| | |
|---|---|
| ಅ. ಪ್ರಾರಂಭಿಕ ಸಂಯೋಜನಾ ಶುಲ್ಕ | – ರೂ. 40,000/– |
| ಬ. ಪ್ರವೇಶ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | – ರೂ. 200/– |
| ಕ. ಪರೀಕ್ಷಾ ಶುಲ್ಕ (ಪ್ರತಿ ವಿದ್ಯಾರ್ಥಿಗೆ) | – ರೂ. 300/– |
| ಡ. ವಾರ್ಷಿಕ ಸಂಯೋಜನೆ ಮುಂದುವರಿಕೆ ಶುಲ್ಕ | – ರೂ. 40,000/– |
| ಇ. ಠೇವಣಿ | – ರಹಿತವಾಗಿ |

ಮುಂದುವರೆದು, ನಿರ್ದೇಶಕರು, ಸಿ.ಡಿ.ಸಿ. ವಿಭಾಗ ಇವರ ಪತ್ರ ದಿನಾಂಕ: 04.07.2023 ರಲ್ಲಿ ಅಭಿಪ್ರಾಯಪಟ್ಟಂತೆ ಇತರೆ ಶುಲ್ಕಗಳಾದ ಅರ್ಹತಾ ಪ್ರಮಾಣ ಪತ್ರ, ಉತ್ತೀರ್ಣ ಪ್ರಮಾಣ ಪತ್ರ, ಘಟಿಕೋತ್ಸವ ಪ್ರಮಾಣ ಪತ್ರ ಶುಲ್ಕ ಮುಂತಾದ ವಿಷಯಗಳಿಗೆ ಶುಲ್ಕವನ್ನು ನಿಗದಿಪಡಿಸುವುದು ಅವಶ್ಯವಿರುತ್ತದೆ. ಆದ್ದರಿಂದ, ಈ ಕುರಿತು ಆಡಳಿತ ಮಂಡಳಿಯ ಮುಂದೆ ಮರುಪರಿಶೀಲನೆಗಾಗಿ ಮಂಡಿಸಲಾಗಿದೆ.

32

# ಸಿಂಡಿಕೇಟ ಸಭೆಯ ಕಲಂ

9) ವಿಷಯ: ಬಿ.ಎ/ಬಿ.ಕಾಂ/ಬಿ.ಎಸ್ಸಿ 2019ರ ಬ್ಯಾಚಿನ ಅಗಷ್ಟ-2021ರ 3ನೇ ಸೆಮಿಸ್ಟರ ಹಾಗೂ ಸೆಪ್ಟಂಬರ್ 2021ರ 4ನೇ ಸೆಮಿಸ್ಟರನ ಅಂಕಪಟ್ಟಿಗಳಲ್ಲಿ ಹಾಗೂ ಬಿ.ಕಾಂ 6ನೇ ಸೆಮಿಸ್ಟರನ ಅಗಷ್ಟ-2022ರ ಪರೀಕ್ಷೆಯ ಅಂಕಪಟ್ಟಿಗಳು ತಪ್ಪಾಗಿ ಮುದ್ರಿತವಾಗಿ ಹೊಗಿದ್ದರ ಕುರಿತು ರಚಿಸಲಾದ ಸತ್ಯ ಶೋಧನಾ ಸಮಿತಿಯು ನೀಡಿದ ವರದಿಯನ್ನು ಪರಿಶೀಲಿಸುವ ಕುರಿತು.

ಟಿಪ್ಪಣೆ:

1. 2019ನೇ ಸಾಲಿನ ನಾನ್ (ಸಿ.ಬಿ.ಸಿ.ಎಸ್) ವಿದ್ಯಾರ್ಥಿಗಳಿಗೆ ಬಿ.ಎ/ಬಿ.ಕಾಂ/ಬಿ.ಎಸ್ಸಿ ಕೋರ್ಸುಗಳ ಅಗಷ್ಟ 2021ರಲ್ಲಿ 3ನೇ ಸೆಮಿಸ್ಟರ ಹಾಗೂ ಸೆಪ್ಟಂಬರ್-2021ರಲ್ಲಿ 4ನೇ ಸೆಮಿಸ್ಟರ ಪಾಸಾದ (Promoted) ಅಂಕಪಟ್ಟಿಗಳು ಆಯಾ ಮಹಾವಿದ್ಯಾಲಯಗಳ ಪ್ರಾಚಾರ್ಯರ ಮುಖಾಂತರ ವಿದ್ಯಾರ್ಥಿಗಳಿಗೆ ಹೋಗಿರುತ್ತವೆ, ಈ ಅಂಕಪಟ್ಟಿಗಳಲ್ಲಿ "ಕಡ್ಡಾಯ ಕನ್ನಡ" ವಿಷಯವನ್ನು ಸೇರಿಸಿ ಫಲಿತಾಂಶ ಪ್ರಕಟಿಸಲಾಗಿರುತ್ತದೆ(ಬಿ.ಎ/ಬಿ.ಎಸ್ಸಿ). ಅದರಂತೆ ಬಿ.ಕಾಂ ಕೋರ್ಸನಲ್ಲಿ Opt/Core Subject ವಿಷಯದ ಅಂಕಗಳನ್ನು ನಮೂದು ಮಾಡಿರುವುದಿಲ್ಲ.

2. ಅದರಂತೆ 2019ನೇ ಬ್ಯಾಚಿನ ಅಗಷ್ಟ-2022ರಲ್ಲಿ ಪಾಸಾದ ಬಿ.ಕಾಂ 6ನೇ ಸೆಮಿಸ್ಟರನ ಅಂಕಪಟ್ಟಿಗಳಲ್ಲಿ "ಕಡ್ಡಾಯ ಕನ್ನಡ" ವಿಷಯವನ್ನು ಸೇರಿಸಿ ಮುದ್ರಿತವಾಗಿರುತ್ತವೆ. ಅವುಗಳನ್ನು ಪರಿಶೀಲಿಸಲಾಗಿತು ಹಾಗೂ ಡಾ॥ಆರ್.ಆರ್.ಮದನಕರ, ಡೀನರು, ಶಿಕ್ಷಣ ನಿಖಾಯ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಿರ್ಣಯದಂತೆ "ಕಡ್ಡಾಯ ಕನ್ನಡ" ವಿಷಯದಲ್ಲಿ ಭರಿಸಿದ ಅಂಕಗಳನ್ನು ಪರಿಗಣಿಸದೇ, ಕನ್ನಡ ವಿಷಯವನ್ನು ಹೊರೆತುಪಡಿಸಿ ಫಲಿತಾಂಶ ಪ್ರಕಟಿಸುವದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿದಂತೆ, ಮುದ್ರಿಸಿದ ಅಂಕಪಟ್ಟಿಗಳು ಹಾಗೂ ಉತ್ತೀರ್ಣ ಪ್ರಮಾಣಗಳನ್ನು ರದ್ದು ಪಡಿಸಿ ಹೊಸದಾಗಿ ಮುದ್ರಿಸಿ ಮಹಾವಿದ್ಯಾಲಯಗಳಿಗೆ ವಿತರಿಸಲಾಗಿದೆ.

3. 2019ರ ಬ್ಯಾಚಿನ ನಾನ್ (ಸಿ.ಬಿ.ಸಿ.ಎಸ್) ವರ್ಗಗಳನ್ನು ನೀಡುವುದಕ್ಕೆ ಸಿಲ್ಯಾಬಸಿನ್ 18.4 Percentage of marks for declaring class in case of Arts and Science Students is based on the aggregate marks obtained in the optional subjects in all the six semesters and in case of commerce students on the basis of aggregate marks obtained in the core papers of all the six semesters. The successful candidates shall be classified as under for the award of class 70% and above for Distinction.

4. ಮುಂದುವರೆದು, ಮಾನ್ಯ ಕುಲಪತಿಗಳ ಆದೇಶದ ಮೇರೆಗೆ ಡೀನರನ್ನೊಳಗೊಂಡ ಡಾ॥ ಚಂದ್ರಮ್ಮ ಎಂ. ಡೀನರು, ವಾಣಿಜ್ಯಶಾಸ್ತ್ರ ನಿಖಾಯ ಇವರ ಅಧ್ಯಕ್ಷತೆಯಲ್ಲಿ ಸತ್ಯಶೋಧನಾ ಸಮಿತಿಯನ್ನು ರಚಿಸಲಾಯಿತು. ಸದರ ಸತ್ಯಶೋಧನಾ ಸಮಿತಿಯು ದಿನಾಂಕ:29.05.2023ರಂದು ತನ್ನ ಅಂತಿಮ ವರದಿಯನ್ನು ಕುಲಸಚಿವರು (ಮೌಲ್ಯಮಾಪನ) ಇವರಿಗೆ ವಿಳಾಸ ಮಾಡಿದ ಮುಚ್ಚಿದ ಲಕೋಟೆಯನ್ನು ಸಲ್ಲಿಸಿರುತ್ತಾರೆ. ಸದರ ಮುಚ್ಚಿದ ಲಕೋಟೆಯನ್ನು ದಿನಾಂಕ:30-05-2023ರಂದು ನಡೆದ ಸಿಂಡಿಕೇಟ ಸಭೆಯ ಕಲಂ(35)ರಲ್ಲಿ ಲಕೋಟೆ ತೆರೆದು ಈ ಕೆಳಗಿನಂತೆ ನಿರ್ಣಯಿಸಲಾಗಿದೆ.

"ಬಿಎ/ಬಿಕಾಂ/ಬಿಎಸ್ಸಿ 2019ರ ಬ್ಯಾಚಿನ ಅಗಸ್ಟ–2021ರ 3ನೇ ಸೆಮಿಸ್ಟರ ಹಾಗೂ ಸೆಪ್ಟಂಬರ್ 2021ರ 4ನೇ ಸೆಮಿಸ್ಟರನ ಅಂಕಪಟ್ಟಿಗಳಲ್ಲಿ ಹಾಗೂ ಬಿ.ಕಾಂ 6ನೇ ಸೆಮಿಸ್ಟರನ ಅಗಸ್ಟ–2022ರ ಪರೀಕ್ಷೆಯ ಅಂಕಪಟ್ಟಿಗಳು ತಪ್ಪಾಗಿ ಮುದ್ರಿತವಾಗಿ ಹೊಗಿದ್ದರ ಕುರಿತು ರಚಿಸಲಾದ ಸತ್ಯ ಶೋಧನಾ ಸಮಿತಿಯು ನೀಡಿದ ಮುಚ್ಚಿದ ಲಕೋಟೆಯನ್ನು ತೆರೆದು ವರದಿಯನ್ನು ಸಿಂಡಿಕೇಟ ಸಭೆಯಲ್ಲಿ ಮಂಡಿಸಿದಾಗ ಸದಸ್ಯರೆಲ್ಲರು ವಿವರಗಳನ್ನು ಪರಿಶೀಲಿಸಿ, ಈ ಬಗ್ಗೆ ದೀರ್ಘವಾಗಿ ಚರ್ಚಿಸುವುದು ಅವಶ್ಯವಾಗಿದ್ದು, ಸದರ ವಿಷಯವನ್ನು ಮುಂಬರುವ ಸಿಂಡಿಕೇಟ ಸಭೆಯಲ್ಲಿ ಪುನ: ಮಂಡಿಸಲು ಸೂಚಿಸಿ ಪ್ರಸ್ತಾವನೆಯನ್ನು ಮುಂದೂಡಲಾಯಿತು."

ಆದ್ದರಿಂದ ಸದರ ವಿಷಯವನ್ನು ಆಡಳಿತ ಮಂಡಳಿಯ ಸಭೆಯ ಪರಿಶೀಲನೆಗಾಗಿ ಪುನ: ಮಂಡಿಸಲಾಗಿದೆ.

ಗೆ
ಕುಲಸಚಿವರು (ಮೌಲ್ಯಮಾಪನ)
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ.

ಮಾನ್ಯರೆ,

ವಿಷಯ:- ಸತ್ಯಶೋಧನಾ ಸಮಿತಿ ವರದಿ
ಉಲ್ಲೇಖ: ತಮ್ಮ ಕಚೇರಿ ಅಧಿಸೂಚನೆ ಸಂಖ್ಯೆ:ಕವಿವಿ/ಪರೀಕ್ಷಾ/ವಾಣಿಜ್ಯ/222-23/72
ದಿನಾಂಕ: 18-04-2023

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಅಧೀಸೂಚನೆಯಲ್ಲಿ ರಚಿಸಿದ ಸತ್ಯ ಶೋಧನಾ ಸಮಿತಿಯು 2019 ನೇ ಸಾಲಿನ ನಾನ್ ಸಿ.ಬಿ.ಸಿ.ಎಸ್. ಬಿ.ಕಾಂ/ಬಿ.ಎ./ಬಿ.ಎಸ್.ಸಿ ಅಗಸ್ಟ್ ಮತ್ತು ಸೆಪ್ಟಂಬರ್ ೨೦೨೧ ರಲ್ಲಿ ಕ್ರಮವಾಗಿ ೩ ಮತ್ತು ೪ ನೇ ಸೆಮಿಸ್ಟರ್‌ನಲ್ಲಿ ಪಾಸಾದ ಅಂಕಪಟ್ಟಿಗಳಲ್ಲಿ Optional/Core Subject ನಲ್ಲಿ 'ಕಡ್ಡಾಯ ಕನ್ನಡ' ವಿಷಯ ಸೇರಿ ಮುದ್ರಿತವಾಗಿದ್ದರ ಹಾಗೂ ಬಿ.ಕಾಂ. ಅಂತಿಮ ವರ್ಷದ ೬ ನೇ ಸೆಮಿಸ್ಟರ್ ಅಂಕಪಟ್ಟಿಗಳಲ್ಲಿ ೩ ಮತ್ತು ೪ನೇ ಸೆಮಿಸ್ಟರ್‌ಗಳಲ್ಲಿರುವ 'ಕಡ್ಡಾಯ ಕನ್ನಡ' ವಿಷಯವನ್ನು ಸೇರಿಸಿ ಫಲಿತಾಂಶ ಪ್ರಕಟವಾಗಿ ಅಂಕಪಟ್ಟಿಗಳು ಹಾಗೂ ಪಾಸಿಂಗ್ ಸರ್ಟಿಫಿಕೇಟ್ ಮುದ್ರಿತವಾಗಿದ್ದರ ಕುರಿತು (ಸತ್ಯ ಶೋಧನಾ ಸಮಿತಿಯು) ದಿನಾಂಕ:28-04-2023 ಹಾಗೂ 04-05-2023 ರಂದು ಸಭೆ ಸೇರಿ ಸಂಬಂಧಿಸಿದ ಬಿ.ಎ./ಬಿ.ಕಾಂ ಮತ್ತು ಬಿ.ಎಸ್‌ಸಿ ವಿಭಾಗಗಳ ಸಿಬ್ಬಂದಿಗಳನ್ನು ಹಾಜರಾಗಲು ತಿಳಿಸಿ, ವಿಚಾರಣೆ ಮಾಡಿದಂತೆ, ಸದರಿ ಸಿಬ್ಬಂದಿಯವರು ಸಮಿತಿಯ ಮುಂದೆ ಹಾಜರಾಗಿ ತಮ್ಮ ಮೌಖಿಕ ಹೇಳಿಕೆಯನ್ನು ನೀಡಿರುತ್ತಾರೆ. ಅದರ ಮುಖ್ಯಾಂಶಗಳು ಈ ಕೆಳಕಂಡಂತಿದೆ:

1. ಸದರಿ ಸಿಬ್ಬಂದಿಗಳು 3 ಮತ್ತು 4 ನೇ ಸೆಮಿಸ್ಟರ್‌ನ ಲೆಡ್ಜರ್ ಪ್ರತಿ ಬಂದಾಗ ಅವುಗಳ ಕುರಿತು ಕಂಪ್ಯೂಟರ್ ವಿಭಾಗಕ್ಕೆ ಮೌಖಿಕವಾಗಿ ತಿಳಿಸಲಾಗಿ ಎಲ್ಲ ಅಂಕಪಟ್ಟಿಗಳನ್ನು ಸಂಬಂಧಿಸಿದ ಮಹಾವಿದ್ಯಾಲಯಕ್ಕೆ ಕಳುಹಿಸಲು ತಿಳಿಸಿರುವುದು ಕಂಡು ಬಂದಿದೆ.
2. ಈ ವಿಷಯವನ್ನು ಕುಲಸಚಿವರು (ಮೌಲ್ಯಮಾಪನ) ಇವರ ಗಮನಕ್ಕೆ ತಂದಿರುವುದಿಲ್ಲ ಎನ್ನುವುದನ್ನು ತಿಳಿಸಿದ್ದಾರೆ.
3. ಎನ್.ಸಿ.ಎಲ್. ಡಿಕ್ಲೆರೇಶನ್‌ದ ವೇಳೆಯಲ್ಲಿ ಕಂಪ್ಯೂಟರ್ ವಿಭಾಗದವರು ಕಡ್ಡಾಯ ಕನ್ನಡ ವಿಷಯವನ್ನು ಹೊರತುಪಡಿಸಿ ಪರೀಕ್ಷಾ ಪರಿಣಾಮವನ್ನು ಮಾಡಿರುವುದಾಗಿ ಕಂಡು ಬಂದಿದೆ.
4. ಬಿ.ಎಸ್‌ಸಿ 6 ನೇ ಸೆಮಿಸ್ಟರ್ ಫಲಿತಾಂಶವನ್ನು ದಿನಾಂಕ: 05-11-2022 ರಂದು ಪ್ರಕಟಿಸಿರುತ್ತಾರೆ. ಅವುಗಳ ಅಂಕಪಟ್ಟಿಗಳನ್ನು ದಿನಾಂಕ: 11-11-2022 ರಂದು ಸಂಬಂಧಿಸಿದ ವಿಭಾಗಕ್ಕೆ ನೀಡಲಾಗಿ ಅವುಗಳಲ್ಲಿ ಕಡ್ಡಾಯ ಕನ್ನಡ ವಿಷಯವನ್ನು ಹೊರತುಪಡಿಸಿ ಅಂಕಪಟ್ಟಿಗಳಲ್ಲಿ ಮುದ್ರಿಸಿದ್ದರಿಂದ ಅವುಗಳು ರೆಗ್ಯುಲೇಶನ್ ಪ್ರಕಾರ ಸರಿಯಾಗಿ ಇದ್ದುದ್ದನ್ನು ಪರಿಶೀಲಿಸಿ ಅವುಗಳನ್ನು ಸಂಬಂಧಿಸಿದ ಮಹಾವಿದ್ಯಾಲಯಗಳಿಗೆ ಕಳುಹಿಸಲಾಗಿದೆ ಎಂದು ತಿಳಿದು ಬಂದಿದೆ.

Opened and read in the Syndicate meeting held on 30/5/2023

5. ಬಿ.ಎ 6 ನೇ ಸೆಮಿಸ್ಟರ್ ಫಲಿತಾಂಶವನ್ನು ದಿನಾಂಕ: 12-11-2022 ರಂದು ಪ್ರಕಟಿಸಿರುತ್ತಾರೆ. ಅವುಗಳ ಅಂಕಪಟ್ಟಿಗಳನ್ನು ದಿನಾಂಕ: 14-11-2022 ರಂದು ಸಂಬಂಧಿಸಿದ ವಿಭಾಗಕ್ಕೆ ನೀಡಲಾಗಿ ಅವುಗಳಲ್ಲಿ ಕಡ್ಡಾಯ ಕನ್ನಡ ವಿಷಯವನ್ನು ಹೊರತುಪಡಿಸಿ ಅಂಕಪಟ್ಟಿಗಳಲ್ಲಿ ಮುದ್ರಿಸಿದ್ದರಿಂದ ಅವುಗಳು ರೆಗ್ಯುಲೇಶನ್ ಪ್ರಕಾರ ಸರಿಯಾಗಿ ಇದ್ದುದ್ದನ್ನು ಪರಿಶೀಲಿಸಿ ಅವುಗಳನ್ನು ಸಂಬಂಧಿಸಿದ ಮಹಾವಿದ್ಯಾಲಯಗಳಿಗೆ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ.
6. ಬಿ.ಕಾಂ ೬ ನೇ ಸೆಮಿಸ್ಟರ್ ಫಲಿತಾಂಶವನ್ನು ದಿನಾಂಕ: 09-11-2022 ರಂದು ಪ್ರಕಟಿಸಿ ದಿನಾಂಕ: 17-11-2022 ರಂದು ಸಂಬಂಧಿಸಿದ ವಿಭಾಗಕ್ಕೆ ವಿತರಿಸಲಾಗಿ ಅವುಗಳಲ್ಲಿ ನ್ಯೂನ್ಯತೆ ಕಂಡುಬಂದಿದ್ದರಿಂದ ಅವುಗಳನ್ನು ಕಳುಹಿಸದೆ ಕುಲಸಚಿವರು (ಮೌಲ್ಯಮಾಪನ) ಇವರ ಗಮನಕ್ಕೆ ತರಲಾಗಿ ಅವುಗಳಲ್ಲಿ 'ಕಡ್ಡಾಯ ಕನ್ನಡ' ವಿಷಯವನ್ನು ಸೇರಿಸಿ ಅಂಕಪಟ್ಟಿಗಳು ಮತ್ತು ಪಾಸಿಂಗ್ ಪ್ರಮಾಣ ಪತ್ರಗಳು ಮುದಿತ್ರವಾಗಿರುವುದು ತಿಳಿದು ಬಂದಿದೆ. ಅಂತಹ ಅಂಕಪಟ್ಟಿಗಳು 8877 ಮತ್ತು ಪಾಸಿಂಗ್ ಸರ್ಟಿಫಿಕೇಟ್‌ಗಳು 8877 ಮುದ್ರಣಗೊಂಡಿವೆ. ಎಲ್ಲಾ ಸೇರಿ ಒಟ್ಟು 17,754 ಗಳನ್ನು ಮಹಾವಿದ್ಯಾಲಯಗಳಿಗೆ ಕಳುಹಿಸದೆ ತಡೆಹಿಡಿದು ಸರಿಪಡಿಸಲು ಮೇಲಾಧಿಕಾರಿಗಳಿಗೆ ತಿಳಿಸಲಾಗಿತ್ತು ಎಂದು ತಿಳಿದು ಬಂದಿರುತ್ತದೆ.

ತದನಂತರ ಸಿಸ್ಟಂ ಅನಾಲಿಸ್ಟ್, ಗಣಕಯಂತ್ರ ವಿಭಾಗ ಇವರನ್ನು ಹಾಜರಾಗಲು ತಿಳಿಸಿದಂತೆ, ಸದರಿಯವರು ಸಮಿತಿ ಮುಂದೆ ಹಾಜರಾಗಿ ಲಿಖಿತ ಹಾಗೂ ಮೌಖಿಕ ಹೇಳಿಕೆಯನ್ನು ಸಮಿತಿಯ ಮುಂದೆ ಸಾದರಪಡಿಸಿರುತ್ತಾರೆ. ಅವರು ವಿವರಿಸಿದ ಅಂಶಗಳು ಈ ಕೆಳಕಂಡಂತಿದೆ:

1. 2019 ನೇ ಬ್ಯಾಚಿನ ೩ ಮತ್ತು ೪ ನೇ ಸೆಮಿಸ್ಟರ್ ಬಿ.ಕಾಂ/ಬಿ.ಎ./ಬಿ.ಎಸ್.ಸಿ ಕೋರ್ಸಗಳಿಗೆ 'ಕನ್ನಡ ಕಡ್ಡಾಯ' ಎಂಬ ವಿಷಯವನ್ನು ಹೊಸದಾಗಿ ಅನ್ವಯಿಸಿರುವ ಹಿನ್ನೆಲೆಯಲ್ಲಿ 'ಕಡ್ಡಾಯ ಕನ್ನಡ' ವಿಷಯದಲ್ಲಿ ಗಳಿಸಿದ ಅಂಕಗಳನ್ನು ಐಚ್ಛಿಕ ವಿಷಯಗಳಲ್ಲಿ ಕೂಡಿಸಬೇಕೆ ಎನ್ನುವ ವಿಷಯವನ್ನು ಆಗಿನ ಕುಲಸಚಿವರು (ಮೌಲ್ಯಮಾಪನ) (ಪ್ರೊ.ಎನ್.ಎಂ. ಸಾಲಿ) ಇವರ ಹತ್ತಿರ ಮೌಖಿಕವಾಗಿ ಚರ್ಚಿಸಲಾಗಿತ್ತು.
2. ಕೋವಿಡ್–19 ಲಾಕ್‌ಡೌನ್ ಪರಿಣಾಮವಾಗಿ ಪರೀಕ್ಷೆಗಳು ಮುಂದೂಡಲ್ಪಟ್ಟಿದ್ದರಿಂದ ಬೆಸ ಮತ್ತು ಸಮ ಪರೀಕ್ಷೆಗಳು ಜರುಗುವಂತಾಗಿದ್ದರಿಂದ ಯಾವುದೇ ನಿರ್ಣಯ ಸೂಚಿಸದೇ ಮೇಲಾಧಿಕಾರಿಗಳ ಸ್ಪಷ್ಟ ಆದೇಶವಿಲ್ಲದೇ ಮುಂದುವರಿಸುವುದು ಕಷ್ಟ ಇರುವ ಕಾರಣ ೩ ಮತ್ತು ೪ನೇ ಸೆಮಿಸ್ಟರ್‌ನಲ್ಲಿ ಐಚ್ಛಿಕ ವಿಷಯಗಳಲ್ಲಿ 'ಕಡ್ಡಾಯ ಕನ್ನಡ' ಅಂಕಗಳು ಸೇರಿರುತ್ತದೆ.
3. ಅಂಕಪಟ್ಟಿಗಳು ಮತ್ತು ಲೆಡ್ಜರ್‌ಗಳನ್ನು ಫಲಿತಾಂಶ ಪ್ರಕಟಗೊಂಡ ನಂತರ ಸಂಬಂಧಿಸಿದ ವಿಭಾಗಕ್ಕೆ ನೀಡಲಾಗಿತ್ತು
4. ಎನ್.ಸಿ.ಎಲ್. ಹೆಸರು ತಿದ್ದುಪಡೆ, ಅಂಕಗಳ ತಿದ್ದುಪಡೆ ಇದ್ದರೆ ಅಂತಹ ಲೆಡ್ಜರ್ ಪ್ರತಿಗಳ ಮೇಲೆ ಕ್ರಮವಹಿಸುವುದಕ್ಕಾಗಿ ಕಾರ್ಯ ನಿರ್ವಾಹಕರು, ಅಧೀಕ್ಷಕರು, ಸಹಾಯಕ ಕುಲಸಚಿವರು, ಉಪಕುಲಸಚಿವರು ಸಹಿ ಮಾಡುತ್ತಾರೆ.
5. ವಿದ್ಯಾಮಂಡಳವು ಹೊರಡಿಸಿದ ನಾನ್ ಸಿಬಿಸಿಎಸ್ ರೆಗ್ಯುಲೇಶನ್ ವಿಷಯವು ಕಂಪ್ಯೂಟರ್ ವಿಭಾಗದ ಗಮನಕ್ಕೆ ಬಂದಿರುವುದಿಲ್ಲವೆಂದು ಮೌಖಿಕವಾಗಿ ತಿಳಿಸಿರುತ್ತಾರೆ.
6. 6 ನೇ ಸೆಮಿಸ್ಟರ್‌ನ ಫಲಿತಾಂಶವನ್ನು ಮೊದಲಿಗೆ ಪ್ರಕಟಿಸಲಾಗಿದೆ ಎಂದು ಹಾಗೂ ಬಿ.ಎ. ಮತ್ತು ಬಿ.ಎಸ್.ಸಿ ಇವುಗಳನ್ನು ನಂತರ ಪ್ರಕಟಿಸಲಾಗಿದೆ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ.

ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸಿ, ಚರ್ಚಿಸಿ, ವಿಚಾರಿಸಿ ಸಮಿತಿಯು ಈ ಕೆಳಗಿನಂತೆ ಸತ್ಯ ಸಂಗತಿಗಳನ್ನು ಕ್ರೋಢಿಕರಿಸಿರುತ್ತದೆ

1. ದಿನಾಂಕ 24-11-2022 ರಂದು ಡಾ.ಆರ್.ಆರ್. ಮದನಕರ, ಡೀನರು ಶಿಕ್ಷಣ ನಿಕಾಯ ಇವರ ಅಧ್ಯಕ್ಷತೆಯಲ್ಲಿ ನಡೆದ ಬಿ.ಕಾಂ ೬ ನೇ ಸೆಮಿಸ್ಟರ್ ಫಲಿತಾಂಶವನ್ನು 'ಕಡ್ಡಾಯ ಕನ್ನಡ' ವಿಷಯದಲ್ಲಿ ಗಳಿಸಿದ ಅಂಕಗಳನ್ನು ಪರಿಗಣಿಸದೆ ಕನ್ನಡ ವಿಷಯವನ್ನು ಹೊರತುಪಡಿಸಿ ಫಲಿತಾಂಶ ಪ್ರಕಟಿಸಲು ನಿರ್ಣಯಿಸಿದ ಅಂಶವನ್ನು ಸಮಿತಿಯು ಗಮನಿಸಿದೆ.

2. ವಿದ್ಯಾಮಂಡಳ ವಿಭಾಗವು 2005-2006ರ ನಂತರ ಸೆಮಿಸ್ಟರ್ ಸ್ಕೀಮಿನ ಸ್ನಾತಕ ರೆಗ್ಯೂಲೇಶನ್ 18.4 ರಲ್ಲಿ ಕಲಾ ಮತ್ತು ವಿಜ್ಞಾನಗಳಲ್ಲಿ ಕೇವಲ Optional(ಐಚ್ಛಿಕ) ಪತ್ರಿಕೆಗಳನ್ನು ಪರಿಗಣನೆಗೆ ತೆಗೆದುಕೊಂಡು ಫಲಿತಾಂಶ ಪ್ರಕಟಿಸಲು ಹಾಗೂ ಅದೇ ರೀತಿಯಾಗಿ ಬಿ.ಕಾಂ ಕೋರ್ಸಿನಲ್ಲಿ Core ವಿಷಯಗಳನ್ನು ಪರಿಗಣಿಸಿ ಫಲಿತಾಂಶ ಪ್ರಕಟಿಸಲು ತಿಳಿಸಿರುವ ಅಂಶವನ್ನು ಗಮನಿಸಲಾಗಿದೆ.
3. 2019 ರ ಬ್ಯಾಚಿನ ನಾನ್–ಸಿಬಿಸಿಎಸ್ 3 ಮತ್ತು 4 ನೇ ಸೆಮಿಸ್ಟರ್ ಕ್ರಮವಾಗಿ ಅಗಸ್ಟ 2021 ಮತ್ತು ಸೆಪ್ಟಂಬರ್ 2021ರ ಪಾಸಾದ ಅಂಕಪಟ್ಟಿಗಳು ಕನ್ನಡ ಕಡ್ಡಾಯ ವಿಷಯ ಸೇರಿಸಿ ಮುದ್ರಿತವಾಗಿದ್ದರಿಂದ ಅವುಗಳು ವಿದ್ಯಾರ್ಥಿಗಳಿಗೆ ತಲುಪಿರುತ್ತವೆ ಅಂತಹ ಒಟ್ಟು 48.573 ಅಂಕಪಟ್ಟಿಗಳಾಗಿರುತ್ತವೆ.
4. ಡಾ.ಬಿ.ಬಸವನಗೌಡ ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 02-01-2023 ರಂದು ತೆಗೆದುಕೊಂಡ ನಿರ್ಣಯವನ್ನು ಸಮಿತಿಯು ಗಮನಿಸಲಾಯಿತು. ಸದರ ಸಮಿತಿಯಲ್ಲಿ ಇಂತಹ ಪ್ರಮಾದಗಳು ಜರುಗಬಾರದೆಂದು ಸಿಲ್ಯಾಬಸ್/ರೆಗ್ಯುಲೇಶನ್‌ನಲ್ಲಿ ತಿಳಿಸಿದಂತೆ Optional/Core Subject ಹಾಗೂ ವರ್ಗ ನೀಡುವಾಗ ಮುಂಚಿತವಾಗಿ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡು ಲೆಡ್ಜರ ಮತ್ತು ಅಂಕಪಟ್ಟಿಗಳನ್ನು ಮುದ್ರಿಸುವ ವ್ಯವಸ್ಥೆ ಜಾರಿಯಲ್ಲಿ ಬರಬೇಕೆಂಬುದನ್ನು ಗಮನಿಸಿರುತ್ತದೆ.
5. ೩ ಮತ್ತು ೪ ನೇ ಸೆಮಿಸ್ಟರಿನ ಲೆಡ್ಜರ್ ಪ್ರತಿಗಳು ಫಲಿತಾಂಶ ಪ್ರಕಟಗೊಂಡ ನಂತರ ಸಂಬಂಧಿಸಿದ ವಿಭಾಗಗಳಿಗೆ ಕಂಪ್ಯೂಟರ್ ವಿಭಾಗದವರು ಫಲಿತಾಂಶದ ಪ್ರತಿ ನೀಡಿದಾಗ ಅವುಗಳನ್ನು ಸಂಬಂಧಿಸಿದ ಕಾರ್ಯನಿರ್ವಾಹಕರು ಪರಿಶೀಲನೆ ಮಾಡದೇ ಇರುವುದು ಕಂಡುಬಂದಿದೆ.
6. ಕಂಪ್ಯೂಟರ್ ವಿಭಾಗವು ಯಾವುದೇ ಒಂದು ಹೊಸದಾಗಿ ಬಂದ ರೆಗ್ಯೂಲೇಶನನ್ನು ಗಮನಿಸದೆ ಪ್ರಾಧಿಕಾರದ ಅನುಮೋದನೆ ಪಡೆಯದೆ ಪ್ರಮಾಣ ಪತ್ರಗಳನ್ನು ಮುದ್ರಿಸಿರುವುದು ಕಂಡುಬಂದಿದೆ.
7. ಬಿ.ಎಸ್‌ಸಿ 6 ನೇ ಸೆಮಿಸ್ಟರ್ ಫಲಿತಾಂಶವನ್ನು ದಿನಾಂಕ: 05-11-2022 ರಂದು ಪ್ರಕಟಿಸಿ ದಿನಾಂಕ: 11-11-2022 ರಂದು ಅಂಕಪಟ್ಟಿಗಳನ್ನು ಸಂಬಂಧಿಸಿದ ವಿಭಾಗಕ್ಕೆ ನೀಡಿರುವುದು ಹಾಗೂ ಅವುಗಳು ರೆಗ್ಯೂಲೇಶನ್ ಪ್ರಕಾರ ಸರಿಯಾಗಿ ಇರುವುದನ್ನು ಸಮಿತಿಯು ಗಮನಿಸಿತು.
8. ಕಂಪ್ಯೂಟರ್ ವಿಭಾಗದವರನ್ನು ವಿಚಾರಿಸಲಾಗಿ ಬಿ.ಕಾಂ ೬ ನೇ ಸೆಮಿಸ್ಟರ್ ಫಲಿತಾಂಶವನ್ನು ಮೊದಲಿಗೆ ಪ್ರಕಟಿಸಲಾಗಿದೆ ತದನಂತರ ಬಿ.ಎ. ಮತ್ತು ಬಿ.ಎಸ್‌ಸಿ ಫಲಿತಾಂಶಗಳನ್ನು ಪ್ರಕಟಿಸಲಾಗಿದೆ ಎಂಬುವ ಅಂಶವನ್ನು ಸಮಿತಿಯು ಪರಿಶೀಲಿಸಲಾಗಿ ಅವರ ಹೇಳಿರುವ ಹೇಳಿಕೆಯು ಸುಳ್ಳು ಎಂದು ಸಭೆಯು ಗಮನಿಸಿತು. ಏಕೆಂದರೆ, ಬಿ.ಎಸ್.ಸಿ ಫಲಿತಾಂಶವನ್ನು ದಿನಾಂಕ: 05-11-2022 ರಂದು ಪ್ರಕಟಿಸಲಾಗಿದೆ. ಆದರೆ ಬಿ.ಕಾಂ ಫಲಿತಾಂಶವು ದಿನಾಂಕ:09-11-2022 ರಂದು ಪ್ರಕಟಿಸಲಾಗಿರುತ್ತದೆ. ಈ ಹೇಳಿಕೆಗಳಲ್ಲಿ ನಿಖರತೆ ಇಲ್ಲದಿರುವುದನ್ನು ಸಮಿತಿ ಪರಿಶೀಲಿಸಿದೆ.

36/A

9. ಕಂಪ್ಯೂಟರ್ ವಿಭಾಗ ಅಚಾತುರ್ಯದಿಂದ ಬಿ.ಕಾಂ ೬ನೇ ಸೆಮಿಸ್ಟರಿನ ಅಂಕಪಟ್ಟಿ ಮತ್ತು ಪಾಸಿಂಗ್ ಸರ್ಟಿಫಿಕೇಟ್ ಸೇರಿ ಒಟ್ಟು 17,754 ಪ್ರಮಾಣ ಪತ್ರಗಳು ರದ್ದಾಗಿರುತ್ತವೆ. ಅದೇ ರೀತಿಯಾಗಿ ಕಂಪ್ಯೂಟರ ವಿಭಾಗ ಮತ್ತು ಬಿ.ಎ/ಬಿ.ಕಾಂ/ಬಿ.ಎಸ್‌ಸಿ ಪರೀಕ್ಷಾ ವಿಭಾಗ ಇವರುಗಳ ಅಚಾತುರ್ಯದಿಂದ 3 ಮತ್ತು ೪ನೇ ಸೆಮಿಸ್ಟರಿನ ಒಟ್ಟು 48,573 ಅಂಕಪಟ್ಟಿಗಳು ಕಡ್ಡಾಯ ಕನ್ನಡ ವಿಷಯದ ಅಂಕಗಳು ಐಚ್ಚಿಕ ವಿಷಯಗಳಲ್ಲಿ ಸೇರಿ ತಪ್ಪಾಗಿ ಫಲಿತಾಂಶ ಮುದ್ರಿತವಾಗಿದೆ.
10. 3 ಮತ್ತು 4 ನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಬಿ.ಎ. ವಿಭಾಗದಿಂದ ತಮ್ಮ ಅಂಕಪಟ್ಟಿಗಳನ್ನು ಕಡ್ಡಾಯ ಕನ್ನಡ ವಿಷಯವನ್ನು ಹೊರತುಪಡಿಸಿ ತಿದ್ದುಪಡಿ ಮಾಡಿಕೊಂಡು ಹೋಗಿರುವುದನ್ನು ದಾಖಲಾತಿಗಳಿಂದ ಸಮಿತಿಯು ಗಮನಿಸಿತು.

ಈ ಮೇಲಿನ ವಾಸ್ತವವಾಗಿರುವ ಸಂಗತಿಗಳನ್ನು ಸಮಿತಿಯು ಶೋಧಿಸಿ ಸಂಬಂಧ ಪಟ್ಟ ಪರೀಕ್ಷಾ ವಿಭಾಗದ ಸಿಬ್ಬಂದಿಗಳು ಮುಂಚಿತವಾಗಿ ಜಾಗೃತಿಯನ್ನು ಕೈಕೊಂಡಿದ್ದರೆ ಹಾಗೂ ಕಾಲಕಾಲಕ್ಕೆ ರಿವೈಸ್ಡ್ ಆದ ಪಠ್ಯಕ್ರಮಗಳನ್ನು ಪರಿಶೀಲಿಸಿ, ಮೇಲಾಧಿಕಾರಿಗಳ ಲಿಖಿತ ಅನುಮೋದನೆ ನಂತರ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಿದ್ದರೆ ಇಂತಹ ಪ್ರಮಾದಗಳು ಜರುಗುತ್ತಿದ್ದಿಲ್ಲ ಎಂಬ ಅಂಶವನ್ನು ಸತ್ಯ ಶೋಧನಾ ಸಮಿತಿಯು ಸ್ಪಷ್ಟ ಪಡಿಸುತ್ತದೆ. ಸಂಬಂಧಿಸಿದ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಕಾಲ ಕಾಲಕ್ಕೆ ತರಬೇತಿ ನೀಡಬೇಕೆಂದು, ಕಾರ್ಯಕ್ಷಮತೆಯನ್ನು ಪರಾಮರ್ಶಿಸಬೇಕೆಂದು ಸಮಿತಿಯು ಒಕ್ಕೊರಲಿನಿಂದ ಶಿಫಾರಸ್ಸು ಮಾಡುತ್ತದೆ.

ದಿನಾಂಕ: 22 /05/2023

<u>ಸಮಿತಿಯ ಸದಸ್ಯರುಗಳ ಹೆಸರು:</u> ಸಹಿ

೧. ಡಾ.(ಶ್ರೀಮತಿ) ಚಂದ್ರಮ್ಮ ಎಂ. ಡೀನರು ವಾಣಿಜ್ಯ ನಿಖಾಯ, ಕ.ವಿ.ವಿ.ಧಾರವಾಡ (ಅಧ್ಯಕ್ಷರು)

೨. ಡಾ.ಎಸ್.ಟಿ. ಬಾಗಲಕೋಟಿ, ಡೀನರು, ಸಮಾಜ ವಿಜ್ಞಾನ ನಿಖಾಕ ಕ.ವಿ.ವಿ. ಧಾರವಾಡ (ಸದಸ್ಯರು)

೩. ಡಾ.ರಾಜೇಂದ್ರ.ಎಮ್.ನಾಯಿಕ ಡೀನರು, ಕಲಾ ನಿಖಾಯ, ಕ.ವಿ.ವಿ. ಧಾವಾಡ (ಸದಸ್ಯರು)

೪. ಡಾ.(ಶ್ರೀಮತಿ) ಮಂಜುಳಾ ಎಸ್.ಆರ್. ಡೀನರು ಕಾನೂನು ನಿಖಾಯ, ಕ.ವಿ.ವಿ.ಧಾರವಾಡ (ಸದಸ್ಯರು)

**Syndicate Item**

Item No. 10)

**Sub: Consideration of A REPORT OF EXPERT COMMITTEE ON KARNATAKA FOREST ACADEMY, GUNGARAGATTI, DHARWAD FOR RECOGNITION AS INSTITUTION FOR SPECIFIED STUDIES / SPECIALIZED STUDIES AND RESEARCH UNDER SECTION 66 OF KSU ACT-2000 BY KARNATAK UNIVERSITY, DHARWAD**

As per the resolutions of Syndicate meeting held on **17-02-2023** under item No. 09, the application from Karnataka Forest Academy, Dharwad was received on **22-02-2023** for recognition its institute as institution for specified studies / specialized studies and research under section 66 of KSU act-2000 by Karnatak University, Dharwad and for award of PG/UG Diploma and certificates to RFO, DyRFO , Beat Forester and Forest Watcher trainees.

In this connection, a Committee headed by Prof. M. David, Director, PMEB, KUD has visited the Karnataka Forest Academy, Gungaragatti, Dharwad on **06-03-2023** to verify the claims as mentioned in their applications and feasibility to recognize the centre for award of certificate as PG/UG Diploma and certificates programmes for RFO, DyRFO , Beat Forester and Forest Watcher trainees. Committee has recommended for reorganization of the said centre as per **66 OF KSU ACT-2000 BY KARNATAK UNIVERSITY, DHARWAD.**

Further, statute has been already framed in this connection under section **66 OF KSU ACT-2000** and approved by the Syndicate in its meeting held on **30-05-2023** under item No. 02 and dispatched to Government for assent from the Hon'ble Chancellor.

Meanwhile, as resolved in syndicate meeting held on **17-02-2023** under No. 09 for fixing the fees, etc, the matter was communicated to Karnataka Forest Academy to remit the Affiliation and other fees. Accordingly, the said academy has paid the necessary fees and MOU has also been executed between KFA and KUD on **31-05-2023**.

Hence, it was necessary to notify the recognition of Karnatak State Forest Academy, Gungaragatti, Dharwad as the recognized institution for specified studies / specialized studies and research under section 66 of KSU act-2000 by Karnatak University, Dharwad for award of PG/UG Diploma and certificates to RFO, DyRFO , Beat Forester and Forest Watcher trainees. The Hon'ble Vice Chancellor approved the report to notify and notified accordingly on 30-06-2023 subject to the ratification in Syndicate. Hence, the item for ratification.

ಸಿಂಡಿಕೇಟ ಕಲಂ

11) ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಶ್ರೀ.ದಯಾನಂದ ಬಸವರಾಜ ಮಾಸೂರ, ಗುತ್ತಿಗೆದಾರರು, ಧಾರವಾಡರವರು ನಿರ್ವಹಿಸಿದ ಕಾಮಗಾರಿಗಳಿಗೆ ಸಂಬಂಧಿಸಿದ ವ್ಯಾಜ್ಯವನ್ನು ಬಗೆಹರಿಸಲು ಸರ್ಕಾರದ ಮಟ್ಟದಲ್ಲಿ ಸಂಧಾನೀಕರಿಸಿ ಸಮಸ್ಯೆಯನ್ನು ಇತ್ಯರ್ಥ ಪಡಿಸುವ ಬಗ್ಗೆ.

ಟಿಪ್ಪಣಿ:

ಕ.ವಿ.ವಿ. ಧಾರವಾಡ ಆವರಣದಲ್ಲಿ ಶ್ರೀ.ಡಿ.ಬಿ.ಮಾಸೂರ, ಗುತ್ತಿಗೆದಾರರು, ಧಾರವಾಡ ಇವರಿಗೆ ಟೆಂಡರ್ ಆಧಾರದಡಿ 2012–13 ಹಾಗೂ 2013–14ರ ಆರ್ಥಿಕ ವರ್ಷಗಳಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ವಹಿಸಲಾಗಿತ್ತು.

| Sl. No. | Name of work | Head Of Account | Tendered Cost in Rs.Lakhs | Date of Markout at site |
|---|---|---|---|---|
| 1 | Construction of building for Lecture complex of Humanities & Social Science & centre for placement & personality Development at KUD. | UGC XI Plan & K.U.D | 319.12 | 22-10-2012 (2012-13) |
| 2 | Construction of building for I P L S at KUD | Government of India DBT | 336.87 | 22-10-2012 (2012-13) |
| 3 | ಕ.ವಿ.ವಿ.ಆವರಣದಲ್ಲಿ ಡಾ. ಡಿ.ಸಿ.ಪಾವಟೆ,ಗಣಿತ ವಿಜ್ಞಾನ ಸಂಸ್ಥೆಯ ಕಟ್ಟಡದ ಕಾಮಗಾರಿ (ಮೊದಲ ಹಂತ) | ವಿಶ್ವವಿದ್ಯಾಲಯದ ಲೆಕ್ಕ ಶೀರ್ಷಿಕೆ 1472 | 1338.53 | 5-1-2013 (2012-13) |
| 4 | Construction of Multi-Utility Complex at KU Campus Dharwad. | UGC-UPE | 615.44 | 14-12-2013 (2013-14) |
| | | Total | 2609.96 | |

ಈ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪ್ರಗತಿ ಕಾಮಗಾರಿಗಳ ಬಿಲ್‌ಗಳನ್ನು ಪಾವತಿಸುವ ಸಂದರ್ಭದಲ್ಲಿ ವಿಶ್ವವಿದ್ಯಾಲಯದಲ್ಲಿ ಘಟಿಸಿದ (ಸಪ್ಟೆಂಬರ್/ಅಕ್ಟೋಬರ್ 2014) ಆಡಳಿತಾತ್ಮಕ ಸಮಸ್ಯೆಗಳಿಗೆ ದಿ: 7–10–2014 ರಂದು ಲೋಕಾಯುಕ್ತ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಇದರಿಂದ ವಿಶ್ವವಿದ್ಯಾಲಯದ ಆಡಳಿತದಲ್ಲಿ ಏರುಪೇರುಗಳು ಉಂಟಾಗಿರುತ್ತವೆ. ಇದೇ ವೇಳೆ ಘನತೆವೆತ್ತ ರಾಜ್ಯಪಾಲರ ಸಚಿವಾಲಯದ ಪತ್ರ ದಿ: 12–11–2014 ದಲ್ಲಿ --not to issue any appointments orders, tenders, contracts and other such orders till further orders ಎಂದು ನಿರ್ದೇಶಿಸಲಾಗಿತ್ತು. ಇದರಿಂದ ಗುತ್ತಿಗೆದಾರರಿಗೆ ಪಾವತಿಸಬೇಕಾದ ಕಾಮಗಾರಿ ಬಿಲ್‌ಗಳು ಬಾಕಿಯಾಗಿ ಉಳಿದಿರುತ್ತವೆ. ಕಾಮಗಾರಿ ಬಿಲ್ಲುಗಳು ಅಕ್ಟೋಬರ್ 2014 ರಿಂದ ಪಾವತಿಯಾಗದ ಪ್ರಯುಕ್ತ ಟೆಂಡರ್ ನಿಯಮಾವಳಿಯನ್ವಯ ಹೆಚ್ಚುವರಿ ಪರಿಹಾರ ಮೊತ್ತಕ್ಕೆ ಗುತ್ತಿಗೆದಾರರು ಪ್ರಸ್ತಾವನೆ ಸಲ್ಲಿಸುತ್ತಿದ್ದುದರಿಂದ ಹೆಚ್ಚಿನ ಆರ್ಥಿಕ ಹೊಣೆ ಬರಬಹುದೆಂದು ಘನತೆವೆತ್ತ ರಾಜ್ಯಪಾಲರ ಗಮನಕ್ಕೆ ಡಿಸೆಂಬರ್ 2014 ರಲ್ಲಿಯೇ ಪತ್ರ ಬರೆದು ಬಿಲ್ ಪಾವತಿಸಲು ಅನುಮತಿ ಕೋರಲಾಗಿತ್ತು. ಇದಕ್ಕೆ ಘನತೆವೆತ್ತ ರಾಜ್ಯಪಾಲರ ಕಚೇರಿ ಪತ್ರ ದಿ: 2–5–2015 ರಲ್ಲಿ ---- to defer the payment of bills to the contractors till the new Vice Chancellor is appointed" ಎಂದು ನಿರ್ದೇಶಿಸಲಾಗಿತ್ತು.

ಈ ಮಧ್ಯೆ ಗುತ್ತಿಗೆದಾರರು, ದಿ: 26–5–2015 ಮತ್ತು ದಿ: 6–7–2015 ರಲ್ಲಿ ವಿಶ್ವವಿದ್ಯಾಲಯಕ್ಕೆ ಮನವಿ ಸಲ್ಲಿಸಿ ಕಾಮಗಾರಿ ಬಾಕಿ ಬಿಲ್‌ಗಳನ್ನು ಪಾವತಿಸದ ಪ್ರಯುಕ್ತ, ಕಾಮಗಾರಿ ನಿಲ್ಲಿಸಿ ಬಾಕಿ ಬಿಲ್‌ಗಳೊಂದಿಗೆ ಕ್ಲೇಮ್ ಅರ್ಜಿ ಇತ್ಯರ್ಥಕ್ಕಾಗಿ ಮನವಿ ಸಲ್ಲಿಸಿರುತ್ತಾರೆ.

ನಂತರ, ಜೂನ್ 2015 ರಲ್ಲಿ ವಿಶ್ವವಿದ್ಯಾಲಯಕ್ಕೆ ಹೊಸ ಕುಲಪತಿಗಳ ನೇಮಕವಾಗಿದ್ದು ಮಾನ್ಯ ಕುಲಪತಿಗಳು ಬಾಕಿ ಕಾಮಗಾರಿ ಬಿಲ್ ಪಾವತಿಸಲು ಅನುಮತಿಗಾಗಿ ಮಾನ್ಯ ರಾಜ್ಯಪಾಲರಿಗೆ ಮನವಿ ಸಲ್ಲಿಸಿರುತ್ತಾರೆ. ಆದರೆ, ಈ ಮಧ್ಯ ಗುತ್ತಿಗೆದಾರರು ದಿ: 14–3–2016 ರಂದು ಹೈಕೋರ್ಟ ಪೀಠ, ಧಾರವಾಡದಲ್ಲಿ ಅರ್ಜಿ ಸಲ್ಲಿಸಿ ಪರಿಹಾರಕ್ಕಾಗಿ **ಮಧ್ಯಸ್ಥಗಾರರ ಕಾಯ್ದೆ 1996 ರಡಿ**, Sole Arbitrator ನ್ನು ನಿಯೋಜಿಸಲು ಕೋರಿದಾಗ ಮಾನ್ಯ ನ್ಯಾಯಾಲಯವು Sole Arbitrator ನ್ನು ನೇಮಿಸಿ ದಿ: 2–9–1996 ರಂದು ಆದೇಶ ಹೊರಡಿಸಿರುತ್ತದೆ. ದಿ: **26–10–2016ರ ಘನತೆವೆತ್ತ ರಾಜ್ಯಪಾಲರ ಸಚಿವಾಲಯದ ಪತ್ರ**ದಲ್ಲಿ ಅಪೂರ್ಣ ಕಾಮಗಾರಿಗಳಿಗೆ ಹಣಪಾವತಿಸಲು ಅನುಮೋದಿಸಿ ಕಟ್ಟಡಗಳನ್ನು ಪೂರ್ಣಗೊಳಿಸಲು ಈ ಕೆಳಗಿನಂತೆ ನಿರ್ದೇಶನ ನೀಡಲಾಗಿರುತ್ತದೆ.

Hon'ble Governor & Chancellor has accorded permission to University to complete the construction of incomplete buildings and to make payments as proposed in the letter dt. 29-9-2016.

ಈ ಮಧ್ಯ ಮಾನ್ಯ ಹೈಕೋರ್ಟ ಆದೇಶದಂತೆ ಮಧ್ಯಸ್ಥಗಾರ (Sole Arbitrator) ರಾಗಿ ಶ್ರೀ. ಬಿ.ಎನ್. ಚಂದ್ರಶೇಖರಯ್ಯ, ಇಂಜನೀಯರ್ ಇನ್ ಚೀಫ್ (ನಿವೃತ್ತ), ಇವರು ಬೆಂಗಳೂರಿನಲ್ಲಿ ಮೊದಲ ಸಭೆ ದಿ: 30–11–2016 ರಂದು ಜರುಗಿಸಿ, ವ್ಯಾಜ್ಯವನ್ನು ಪಕ್ಷಗಾರರು ತಮ್ಮ ಹಂತದಲ್ಲಿಯೇ ರಾಜಿ ಸೂತ್ರಕ್ಕಾಗಿ ಸೂಚಿಸಿರುತ್ತಾರೆ.

ಅದರಂತೆ ಗುತ್ತಿಗೆದಾರರು ಮತ್ತು ವಿಶ್ವವಿದ್ಯಾಲಯದ ಮಧ್ಯ ದಿನಾಂಕ : 7.3.2017, 14.3.2017, 22.03.2017 ಮತ್ತು 04.04.2017 ರಂದು ಸಂಧಾನ ಸಭೆಗಳನ್ನು ಜರುಗಿಸಿ ಕೊನೆಗೆ ಮಧ್ಯಸ್ಥಗಾರ ನ್ಯಾಯಾಲಯಕ್ಕೆ ದಿನಾಂಕ 10.04.2017 ರಂದು ಸಂಧಾನ ಸೂತ್ರವನ್ನು ಇಬ್ಬರ ವತಿಯಿಂದ Compromise Petition ಸಲ್ಲಿಸಲಾಗಿರುತ್ತದೆ.

ದಿನಾಂಕ 10/4/2017 ರಂದು ಜರುಗಿದ ಮಧ್ಯಸ್ತಗಾರ ನ್ಯಾಯಾಲಯದ ನಡಾವಳಿಗಳನ್ವಯ ಗುತ್ತಿಗೆದಾರರು ಹಾಗೂ ವಿಶ್ವವಿದ್ಯಾಲಯದ ನಡುವೆ ರಾಜಿಸೂತ್ರದಂತೆ ಬಾಕಿ ಕಾಮಗಾರಿ ಬಿಲ್ಲಗಳನ್ನು ಹಾಗೂ ಇತ್ಯಾದಿಗಳಿಗೆ ಬಡ್ಡಿ ಸೇರಿಸಿ ದಿನಾಂಕ 25/4/2017 ರೊಳಗೆ ಹಣ ಪಾವತಿಸಲು ಮಧ್ಯಂತರ ಆದೇಶವಾಗಿರಿತ್ತದೆ. ಸದರಿ ನ್ಯಾಯಾಲಯದ ನಡಾವಳಿಗಳನ್ವಯ ಬಾಕಿ ಬಿಲ್ಲಗಳ ಮೊತ್ತವನ್ನು ಗುತ್ತಿಗೆದಾರರಿಗೆ ದಿನಾಂಕ 15/9/2017 ರಿಂದ 4/11/2017 ರ ಅವದಿಯಲ್ಲಿ ಪಾವತಿಸಿ ರಾಜಿ ಸೂತ್ರದಂತೆ ಕಾಮಗಾರಿ ಆರಂಭಿಸಲು ಮುಂಗಡ ಹಣ, ಇತ್ಯಾದಿ ಸುಮಾರು ರೂ. 3.28 ಕೊಟಿಗಳನ್ನು ಪಾವತಿಸಲು ಕ್ರಮವಹಿಸುತ್ತಿದ್ದ ಹಂತದಲ್ಲಿ ಮಧ್ಯಸ್ತಗಾರರು ಪ್ರಕರಣಗಳ ವಿಚಾರಣೆ ಜರುಗಿಸದೆ ಏಕಾಏಕಿ ದಿನಾಂಕ 14/5/2018 ರಂದು ಅಂತಿಮ ಅವಾರ್ಡ ಹೊರಡಿಸಿದ್ದು ಈ ತೀರ್ಪು ನ್ಯಾಯಸಮ್ಮತವಲ್ಲವೆಂದು ವಿಶ್ವವಿದ್ಯಾಲಯವು ಮಧ್ಯಸ್ಥಗಾರರ ಕಾಯ್ದೆ 1996 ಕಲಂ 34ರಡಿ ಸಿಟಿ ಸಿವಿಲ್ ಕೋರ್ಟ ಬೆಂಗಳೂರುದಲ್ಲಿ ದಿನಾಂಕ 14/9/2018 ರಂದು ಅರ್ಜಿ ಸಲ್ಲಿಸಿದ್ದು ಸದರಿ ನಾಲ್ಕು ಕಾಮಗಾರಿಗಳ ನಾಲ್ಕು ಪ್ರಕರಣ ನ್ಯಾಯ ನಿರ್ಣಯಕ್ಕೆ ಬಾಕಿ ಇರುತ್ತವೆ.

ವಿಷಯ ಹೀಗಿರುವಾಗ, ಗುತ್ತಿಗೆದಾರರು ಮಾನ್ಯ ಕುಲಪತಿಗಳಿಗೆ ದಿನಾಂಕ; 1/4/2021, 9/9/2021 ಮತ್ತು 24/12/2021 ರಂದು ಮನವಿ ಪತ್ರಗಳನ್ನು ಸಲ್ಲಿಸಿ ದಿನಾಂಕ: 1/4/2021 ಮತ್ತು 9/9/2021 ರಂದು Arbitral Award ಮೊತ್ತವನ್ನು ಬಡ್ಡಿ ಸಮೇತ ಅಂದರೆ ಸುಮಾರು ರೂ. 46.22 ಕೋಟಿಗಳನ್ನು ನೀಡಬೇಕು ತಪ್ಪಿದಲ್ಲಿ ಸದರಿ ವಿಷಯದ ಕುರಿತು ನ್ಯಾಯಾಲಯದಲ್ಲಿ Execution Petition ಸಲ್ಲಿಸಲಾಗುವದೆಂದು ತಿಳಿಸಿರುತ್ತಾರೆ. Commercial Court, ಬೆಂಗಳೂರು ಇವರ ನ್ಯಾಯಾಲಯದಲ್ಲಿ ವಿಶ್ವವಿದ್ಯಾಲಯದ ಪರ ವಾದ ಮಂಡಿಸುತ್ತಿರುವ ವಕೀಲರು ಸಹ ಸಂಧಾನ ಮಾರ್ಗ ಸಾಧ್ಯವಿದ್ದಲ್ಲಿ ಆ ಆಯ್ಕೆಯನ್ನು ಪ್ರಯತ್ನಿಸುವದರ ಬಗ್ಗೆ ಯೋಚಿಸಬಹುದೆಂದು ವಿಶ್ವವಿದ್ಯಾಲಯಕ್ಕೆ ಸಲಹೆ ನೀಡಿರುತ್ತಾರೆ.

ಈ ಹಿನ್ನಲೆಯಲ್ಲಿ ದಿನಾಂಕ 11/9/2021 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಒಂದು ಸಿಂಡಿಕೇಟ ಉಪಸಮಿತಿ ರಚಿಸಿ ಗುತ್ತಿಗೆದಾರರೊಂದಿಗೆ ಸಂಧಾನೀಕರಿಸಿ ವರದಿ ಸಲ್ಲಿಸಬೇಕೆಂದು ನಿರ್ಧರಿಸಲಾಗಿರುತ್ತದೆ. ಅದರಂತೆ ಉಸಮಿತಿಯು ದಿನಾಂಕ 24/12/2021 ಮತ್ತು 31/12/2021 ರಂದು ಸಭೆಗಳನ್ನು ಜರುಗಿಸಿ, ಸದರ ಸಭೆಗಳ ನಡಾವಳಿಗಳನ್ನು ದಿನಾಂಕ 4/2/2022 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ಈ ಕೆಳಕಂಡ ಶಿಫಾರಸ್ಸುಗಳನ್ನು ಒಪ್ಪಿ ಅಂಗೀಕರಿಸಿರುತ್ತದೆ.

1) The Agency & KUD shall file a memo in the Commercial Court Bangalore suitably stating that efforts would be made to settle the case through Negotiation.
2) As a positive step towards negotiation an amount of Rs.2.0 crores (Rupees two crores only) is to be paid to the contractor as an advance amount.
3) Arrangements shall be made to hold a negotiation meeting between the parties at the Government level with respect to the issue of settlement of claims, the issue of completion of the remaining works and release of funds.

ಅದರಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸರ್ಕಾರದ ಇತ್ತೀಚಿನ ಪತ್ರ ಸಂಖ್ಯೆ : ಇಡಿ 109 ಯು.ಕೆ.ವಿ. 2018, ದಿ: 10–4–2023 ರಲ್ಲಿ ಸದರಿ ಪ್ರಸ್ತಾವನೆಗೆ ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸುವಂತೆ ಸೂಚಿಸುತ್ತಾ ಯಾವುದೇ ಅನುದಾನ ಒದಗಿಸಲು ಸಾಧ್ಯವಿಲ್ಲವೆಂದು ತಿಳಿಸಿದೆ.

ಈ ಹಂತದಲ್ಲಿ ನಿವೇದಿಸುವುದೇನೆಂದರೆ, ಕರ್ನಾಟಕ ವಿಶ್ವವಿದ್ಯಾಲಯವು ಇತ್ತೀಚೆಗೆ ಹಣಕಾಸಿನ ಕೊರತೆ, ನೇಮಕಾತಿಗಳ ವಿಳಂಬ, ಕುಂಠಿತಗೊಂಡ ಅಭಿವೃದ್ಧಿ ಕಾರ್ಯಗಳು ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿರುತ್ತದೆ. ಅದರಲ್ಲಿಯೂ ಪ್ರಮುಖವಾಗಿ ಈವರೆಗೆ ಆಂತರಿಕವಾಗಿ ಸಾಕಷ್ಟು ಸಂಪನ್ಮೂಲಗಳನ್ನು ಕ್ರೋಢಿಕರಿಸುತ್ತಾ ಬಹುತೇಕ ಸ್ವಾವಲಂಬನೆಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಾ ಬರುತ್ತಿದ್ದ ವಿಶ್ವವಿದ್ಯಾಲಯದಲ್ಲಿ ಈ ಕೆಳಕಾಣಿಸಿದ ಕಾರಣಗಳಿಂದ ಆರ್ಥಿಕ ವ್ಯವಸ್ಥೆ ಕುಂಠಿತಗೊಂಡಿರುತ್ತದೆ.

1. ದೂರ ಸಂಪರ್ಕ ಶಿಕ್ಷಣ ಯೋಜನೆ ಸ್ಥಗಿತಗೊಂಡಿರುತ್ತದೆ.
2. ಕೋವಿಡ್–19ರ ಸಾಂಕ್ರಾಮಿಕ ರೋಗದಿಂದ ಉಂಟಾದ ತುರ್ತು ಪರಿಸ್ಥಿತಿಯಿಂದ ಶುಲ್ಕ ಸಂಗ್ರಹಣೆಯಲ್ಲಿ ಭಾರೀ ಕುಸಿತವಾಗಿರುವುದು.
3. ಸರ್ಕಾರವು ವಿದ್ಯಾರ್ಥಿಗಳಿಗೆ ನೀಡಿದ ಶುಲ್ಕ ವಿನಾಯಿತಿಯ ಹಣವು ಸರ್ಕಾರದಿಂದ ಪೂರ್ಣ ಪ್ರಮಾಣದಲ್ಲಿ ಪಾವತಿಯಾಗದಿರುವುದು.

40

4. ಬೋಧಕ/ಬೋಧಕೇತರ/ನಿವೃತ್ತಿ ನೌಕರರಿಗೆ ಪಾವತಿಸಬೇಕಾದ ಅನುದಾನವು ಸರ್ಕಾರದಿಂದ ಅಗತ್ಯವಿದ್ದಷ್ಟು ಬಿಡುಗಡೆಯಾಗದಿರುವುದು.

5. ಸಹಾಯಕ / ಅತಿಥಿ ಉಪನ್ಯಾಸಕರುಗಳಿಗೆ ಮತ್ತು ಖಾಲಿ ಇರುವ ಬೋಧಕೇತರ ಹುದ್ದೆಗಳಿಗೆ ನಿಯೋಜಿಸಿಕೊಂಡ ತಾತ್ಕಾಲಿಕ ಸಿಬ್ಬಂದಿಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ.

6. ವಿಶ್ವವಿದ್ಯಾಲಯಕ್ಕಾಗಿ ಸ್ವಾಧೀನ ಪಡಿಸಿಕೊಂಡ ಭೂಸ್ವಾಧೀನ ವ್ಯಾಜ್ಯಗಳಿಗಾಗಿ ಭೂಸ್ವಾಧೀನ ಮತ್ತು ಇತರೇ ವ್ಯಾಜ್ಯಗಳಲ್ಲಿ ಪರಿಹಾರ ಪಾವತಿಸಬೇಕಿರುವ ಅನಿವಾರ್ಯತೆ ಇದೆ.

ದಿನಾಂಕ **12/6/2023** ರಂದು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಶ್ರೀ.ದಯಾನಂದ ಬಸವರಾಜ ಮಾಸೂರ, ಗುತ್ತಿಗೆದಾರರು, ಧಾರವಾಡ ಇವರು ಮತ್ತೊಮ್ಮೆ ಅರ್ಜಿ ಸಲ್ಲಿಸಿ ಅವಾರ್ಡ ಮೊತ್ತದೊಂದಿಗೆ ಚಕ್ರಬಡ್ಡಿ ಸೇರಿ ಒಟ್ಟು ರೂ. **55.23 ಕೋಟಿ** ಪಾವತಿಸಲು ವಿನಂತಿಸಿರುತ್ತಾರೆ.

ಈ ಎಲ್ಲ ಅಂಶಗಳ ಹಿನ್ನಲೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಶ್ರೀ ದಯಾನಂದ ಬಸವರಾಜ ಮಾಸೂರ, ಗುತ್ತಿಗೆದಾರರು, ಧಾರವಾಡ ರವರು ನಿರ್ವಹಿಸಿದ ಕಾಮಗಾರಿಗಳ ವ್ಯಾಜ್ಯಕ್ಕೆ ಸಂಬಂಧಿಸಿದಂತೆ, ಬಾಕಿ ಕಾಮಗಾರಿ ಮುಕ್ತಾ ಮತ್ತು ಬಾಕಿ ಹಣ ಪಾವತಿ ವಿಷಯಗಳ ಬಗ್ಗೆ ಸರ್ಕಾರದ ಮಟ್ಟದಲ್ಲಿ ಸಂಧಾನ ಸಭೆಯನ್ನು ಆಯೋಜಿಸಿ ಸಂಧಾನೀಕರಿಸಿದ ಮೊತ್ತವನ್ನು ಒದಗಿಸಿ ಸಮಸ್ಯೆಯನ್ನು ಇತ್ಯರ್ಥಪಡಿಸಲು ಸರ್ಕಾರಕ್ಕೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಲು ವಿಷಯವನ್ನು ಸಿಂಡಿಕೇಟ ಸಭೆಯ ಪರಿಶೀಲನೆಗೆ ಮಂಡಿಸಿದೆ.

**KARNATAK UNIVERSITY, DHARWAD**

**Brief Report of action taken on the resolutions of the Syndicate held on 20th March, 2023**

| ಕಲಂ. ನಂ. | ವಿಷಯ | ವಿಭಾಗ | ನಿರ್ಣಯ | ಕ್ರಮಕೈಗೊಂಡ ಕುರಿತು |
|---|---|---|---|---|
| 1) | ದಿನಾಂಕ 17.02.2023ರ ಸಾಧಾರಣ ಸಿಂಡಿಕೇಟ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ದೃಢೀಕರಿಸುವ ಕುರಿತು. | | ದಿನಾಂಕ 17.02.2023ರ ಸಾಧಾರಣ ಸಿಂಡಿಕೇಟ ಸಭೆಯ ನಡಾವಳಿಗಳನ್ನು ಯಥಾವತ್ತಾಗಿ ದೃಢೀಕರಿಸಲಾಯಿತು. | Noted |
| 2) | ದಿನಾಂಕ: 24-02-2023 ರಂದು ನಡೆದ ಸ್ಥಿರ ಆಸ್ತಿ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಪರಿಶೀಲಿಸುವುದು. | ಕಟ್ಟಡ ವಿಭಾಗ | ದಿನಾಂಕ: 24-02-2023 ರಂದು ನಡೆದ ಸ್ಥಿರ ಆಸ್ತಿ ಸಮಿತಿ ಸಭೆಯ ಶಿಫಾರಸ್ಸುಗಳನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು. | ಸಿಂಡಿಕೇಟ್ ನಿರ್ಣಯದಂತೆ ಕ್ರಮ ಜರುಗಿಸಲಾಗಿದೆ. |
| 3) | ಡಾ. ಬಿ.ಆರ್.ಅಂಬೇಡ್ಕರವರು ಧಾರವಾಡ ಶಹರಕ್ಕೆ ಭೇಟಿ ನೀಡಿದ್ದರ ಸವಿನೆನಪಿಗಾಗಿ "ಬೃಹತ್ ಹೈಟೆಕ್ ಸ್ಮಾರಕ" ಭವನ ನಿರ್ಮಿಸಲು ಸ್ಥಳ ಗೊತ್ತು ಪಡಿಸುವ ಕುರಿತು ಪರಿಶೀಲಿಸುವುದು. | ಕಟ್ಟಡ ವಿಭಾಗ | ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಡಾ. ಬಿ.ಆರ್.ಅಂಬೇಡ್ಕರ ಸ್ಮಾರಕ ಭವನ ಮತ್ತು ಮ್ಯೂಸಿಯಂ ಕಟ್ಟಡ ಕಾಮಗಾರಿ ಸಂಬಂಧ 2019-20ರಲ್ಲಿ ರೂ.500.00 ಲಕ್ಷಗಳ ಅನುದಾನ ಮಂಜೂರಾತಿ ನೀಡಿದ್ದು. ಸದರಿ ಪ್ರಸ್ತಾವನೆ ಪೂರ್ಣಗೊಳಿಸುವುದರ ಜೊತೆಗೆ ಡಾ. ಬಿ.ಆರ್.ಅಂಬೇಡ್ಕರವರ "ಬೃಹತ ಹೈಟೆಕ್ ಸ್ಮಾರಕ" ಭವನ ನಿರ್ಮಿಸಲು ರೂ.1,000.00 ಲಕ್ಷಗಳ ಯೋಜನೆಯನ್ನು ಕವಿವಿ ಆವರಣದ ಡಾ. ಬಿ. ಆರ್. ಅಂಬೇಡ್ಕರ, ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸ್ಥಳದಲ್ಲಿಯೇ ಲಭ್ಯವಿರುವ ಜಾಗದಲ್ಲಿ ಕಾರ್ಯಗತಗೊಳಿಸಲು ಸಿಂಡಿಕೇಟ ನಿರ್ಣಯಿಸಿತು. | ಸಿಂಡಿಕೇಟ್ ನಿರ್ಣಯದಂತೆ ಸದರಿ ಪ್ರಸ್ತಾವನೆಯನ್ನು ಕಾರ್ಯಗತಗೊಳಿಸಲು ಕಚೇರಿ ಪತ್ರ ಸಂಖ್ಯೆ 826 ದಿನಾಂಕ 28-03-2023 ರ ಮೂಲಕ ಮಾನ್ಯ ಜಿಲ್ಲಾಧಿಕಾರಿಗಳು, ಧಾರವಾಡ ಇವರಿಗೆ ಪತ್ರವನ್ನು ಸಲ್ಲಿಸಿ ಕ್ರಮ ಜರುಗಿಸಲಾಗಿದೆ. |
| 4) | Ratification of the action taken by Hon'ble Vice-Chancellor regarding cancellation of Sabbatical Leave from 01.11.2022 to 31.10.2023 (One year) sanctioned to Dr. R.R.Biradar, Professor, PG Dept. of Economics, Karnatak University, Dharwad to carry out research project on "Impact of Alcohol Consumption on Poverty in Karnataka: A Household Level Study" in Karnatak University, Dharwad as per his request. | ಸಿಆಸು (ಶಿಕ್ಷಕ) ವಿಭಾಗ | Syndicate Resolved to ratify the action taken by the Hon'ble Vice-Chancellor for having cancelled the sanctioned Sabbatical Leave from 01.11.2022 to 31.10.2023 (One year) to Dr. R.R.Biradar, Professor, PG Dept. of Economics, Karnatak University, Dharwad to carry out research project on "Impact of Alcohol Consumption on Poverty in Karnataka: A Household Level Study" in Karnatak University, Dharwad as per his request. | As per the Syndicate Resolution Sabbatical leave i.e. from 01.11.2022 to 31.10.2023 sanctioned to Dr. R. R. Biradar is cancelled vide office order No. 2999 dated 14.02.2023. |

| | | | | |
|---|---|---|---|---|
| 5) | Ratification of the action taken by the Hon`ble Vice-Chancellor for having permitted and sanctioned OOD to *Dr.Devarajan Thangadurai,* Associate Professor, P G Department of Studies in *Botany,* K U Dharwad to participate in *short-term training on "Identification, Formulation and Application of Biocontrol Agents against Plant Diseases"* to held at *Bangkok* from *29th November to 03rd December, 2022.* | ಸಿಆಸು (ಶಿಕ್ಷಕ) ವಿಭಾಗ | Syndicate resolved to ratify the action taken by the Hon`ble Vice-Chancellor for having permitted and sanctioned OOD to *Dr. Devarajan Thangadurai,* Associate Professor, P G Department of Studies in *Botany,* K U Dharwad to participate in *short-term training on "Identification, Formulation and Application of Biocontrol Agents against Plant Diseases"* to held at *Bangkok* from *29th November to 03rd December, 2022.* | Noted |
| 6) | ಡಾ.ಎಸ್.ಟಿ.ಬಾಗಲಕೋಟಿ, ಪ್ರಾಧ್ಯಾಪಕರು & ಸಿಂಡಿಕೇಟ ಸದಸ್ಯರು ಇವರನ್ನು ಹಣಕಾಸು ಸಮಿತಿ ಸಭೆಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು. | ಸಿಂಡಿಕೇಟ ವಿಭಾಗ | ಡಾ.ಎಸ್.ಟಿ.ಬಾಗಲಕೋಟಿ, ಪ್ರಾಧ್ಯಾಪಕರು & ಸಿಂಡಿಕೇಟ ಸದಸ್ಯರು ಇವರನ್ನು ಹಣಕಾಸು ಸಮಿತಿ ಸಭೆಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಿದ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸಿತು. | Noted |
| | | | <u>ಅಧ್ಯಕ್ಷರ ಅಪ್ಪಣೆಮೇರೆಗೆ ಬಂದ ವಿಷಯಗಳು</u> | |
| 7) | ಶ್ರೀಮತಿ ಕಮಲವ್ವ ಕೋಂ. ಮಹೇಶ ಬೇವಿನಕಟ್ಟಿ ಇವರನ್ನು ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' ಹುದ್ದೆಗೆ (ಸಿಪಾಯಿ) ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಗೆ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯುವ ಕುರಿತು. | ಸಿಆಸು (ಶಿಕ್ಷಕೇತರ) ವಿಭಾಗ | ದಿ. ಶ್ರೀ. ಮಹೇಶ ಜಿ. ಬೇವಿನಕಟ್ಟಿ ಇವರ ನಿಧನದಿಂದಾಗಿ ಶ್ರೀಮತಿ. ಕಮಲವ್ವ ಕೋಂ. ಮಹೇಶ ಬೇವಿನಕಟ್ಟಿ ಇವರನ್ನು ಅನುಕಂಪದ ಆಧಾರದ ಮೇಲೆ ಗ್ರೂಪ್ 'ಡಿ' ಹುದ್ದೆಗೆ (ಸಿಪಾಯಿ) ನೇಮಕಾತಿ ಮಾಡುವ ಕುರಿತಾದ ಪ್ರಸ್ತಾವನೆಗೆ ಸಿಂಡಿಕೇಟ್ ಸಭೆಯು ಪರಿಶೀಲಿಸಿ KCS ನಿಯಮದಂತೆ ಕ್ರಮ ಕೈಗೊಳ್ಳಲು ಸಿಂಡಿಕೇಟ್ ಅನುಮೋದನೆ ನೀಡಿತು. | ಸಿಂಡಿಕೇಟ್ ನಿರ್ಣಯದಂತೆ ಶ್ರೀಮತಿ. ಕೆ. ಎಮ್. ಬೇವಿನಕಟ್ಟಿ ಇವರನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡಿ ಕಚೇರಿ ಪತ್ರ ಸಂಖ್ಯೆ 3613 ದಿನಾಂಕ 28.03.2023 ರಂದು ಆದೇಶ ಹೊರಡಿಸಲಾಗಿದೆ. |
| 8) | Establishment of CCTV Camera Surveillance (24X7) at entire Karnatak University, Dharwad for approval. | ಪಿ.ಎಮ್.ಇ.ಬಿ ವಿಭಾಗ | Syndicate after detailed discussion resolved to accept the suggestions given by the ACP and Security Agency during the meeting on 15-03-2023. In perusal of suggestions given by the police, boundary consolidation & regular patrolling ideas to be adopted immediately, alongside with this it is also resolved to strengthen CCTV surveillance (24x7) for the same purpose, e-tender for short term with the permission of competent authority to be called immediately in perusal of provisions of KTPP Act,1999. | As per syndicate resolution the work is under progress. |

| | | | | |
|---|---|---|---|---|
| 9) | ಬಿಓಎ ಶಿಫಾರಸ್ಸಿನನ್ವಯ ಕರ್ನಾಟಕ ವಿಶ್ವವಿದ್ಯಾಲಯದ ಬೋಧಕರುಗಳಿಗೆ ಯುಜಿಸಿ ಸಿಎಎಸ್ ಅಡಿಯಲ್ಲಿ ಬೋಧಕರುಗಳ ಪದೋನ್ನತಿಯ ವಿಷಯವನ್ನು ಪರಿಗಣಿಸುವ ಕುರಿತು. | ಬಿಓಎ ವಿಭಾಗ | ಸಿಂಡಿಕೇಟ ಸಭೆಯು ಪ್ರಸ್ತಾವನೆಯಲ್ಲಿ ಕಾಣಿಸಿದ ಬಿಓಎ ಶಿಫಾರಸ್ಸುಗಳನ್ನು ಸವಿಸ್ತಾರವಾಗಿ ಪರಿಶೀಲಿಸಿ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದಂತಹ ಅ.ಸಂ. 02, 19, 20, 51 & 69 ರಲ್ಲಿನ ಬೋಧಕ ಸಿಬ್ಬಂದಿಗಳನ್ನು ಹೊರತು ಪಡಿಸಿ ಇನ್ನುಳಿದ ಬೋಧಕ ಸಿಬ್ಬಂದಿಗಳಿಗೆ ಯುಜಿಸಿ ಸಿಎಎಸ್ ಅಡಿಯಲ್ಲಿ ಪದೋನ್ನತಿಯನ್ನು ನೀಡಲು ಕ್ರಮ ಜರುಗಿಸಲು ನಿರ್ಣಯಿಸಿತು.<br>ಮುಂದುವರೆದು, ಅ.ಸಂ. 02, 19, 20, 51 & 69 ರಲ್ಲಿ ಕಾಣಿಸಿದ ಬೋಧಕ ಸಿಬ್ಬಂದಿಗಳು ದಾಖಲಿಸಿದ ನ್ಯಾಯಾಲಯದ ಪ್ರಕರಣಗಳು ಇತ್ಯರ್ಥಗೊಂಡ ನಂತರ ಮಾನ್ಯ ನ್ಯಾಯಾಲಯದ ಆದೇಶದನುಸಾರ ಪದೋನ್ನತಿ ವಿಸ್ತರಿಸಲು ಅವಶ್ಯಕ ಕ್ರಮ ಕೈಗೊಳ್ಳಲು ಸಿಂಡಿಕೇಟ ಸಭೆಯು ನಿರ್ಣಯಿಸಿತು. | ಸಿಂಡಿಕೇಟ್ ನಿರ್ಣಯದಂತೆ ಪದ್ನೋನ್ನತಿ ಆದೇಶ ನೀಡಲು ಅವಶ್ಯಕ ಕ್ರಮ ಕೈಗೊಳ್ಳಲು ಸಿಆಸು ವಿಭಾಗಕ್ಕೆ ಕಚೇರಿ ಟಿಪ್ಪಣಿ ಸಂಖ್ಯೆ 279 ದಿನಾಂಕ 20.03.2023 ರ ಮೂಲಕ ಸಲ್ಲಿಸಿ ಕ್ರಮ ಕೈಗೊಳ್ಳಲಾಗಿದೆ. |
| 10) | Regarding releasing of pensionary benefits to Dr. P.M.Patil, Retired Professor, Dept. of Mathematics, KU, Dharwad. | ಸಿಆಸು (ಶಿಕ್ಷಕ) ವಿಭಾಗ | Syndicate after going through the report submitted by the team who visited Rajbhavan on 17.03.2023 on the discussions held with Sri. Pankaj Kumar Mehta, Private Secretary to the Hon'ble Chancellor, Sri. Prabhu Shankar, Deputy Secretary to Governor, I/c Special Secretary and Sri. Madhusudan R. S., Senior Assistant regarding releasing of unsettled pensionary benefits to Dr. P.M.Patil, Retired Professor, Dept. of Mathematics, K.U. Dharwad and resolved to accept the suggestions and directions given by Honorable Chancellor's Secretariat. In perusal of that it is resolved to regulate the pension and to release commutation except DCRG as has been done in similar cases of audit objections of other teachers.<br>Further DCRG will be released when the following conditions are fulfilled. | ಸಿಂಡಿಕೇಟ್ ನಿರ್ಣಯದಂತೆ ಡಾ. ಪಿ. ಎಮ್. ಪಾಟೀಲ, ಪ್ರಾಧ್ಯಾಪಕರು (ನಿವೃತ್ತ) ಇವರ ನಿವೃತ್ತ ವೇತನ ಹಾಗೂ ಸಂಬಂಧಿತ ಸೌಲಭ್ಯಗಳ ಮಂಜೂರ ಮಾಡಲು ಕಚೇರಿ ಆದೇಶ ಸಂಖ್ಯೆ 118 ದಿನಾಂಕ 17.04.2023 ರ ಮೂಲಕ ಸದರಿಯವರು ಸೇವೆಗೆ ಸೇರುವ ಪೂರ್ವದಲ್ಲಿ ಸಲ್ಲಿಸಿದ ಸೇವಾವಧಿಯಲ್ಲಿರುವ ಗಳಿಕೆ ರಜೆಗಳನ್ನು ಮುಂದುವರೆಸಲಾಗಿದೆಂದು ಹೊರಡಿಸಿದ ಆದೇಶವನ್ನು ಹಿಂಪಡೆಯುವ ಬಗ್ಗೆ ಕಚೇರಿ ಆದೇಶ ಸಂಖ್ಯೆ 119 ದಿನಾಂಕ 17.04.2023 ರ ಮೂಲಕ ಕ್ರಮ ಕೈಗೊಳ್ಳಲಾಗಿದೆ. |

| | | | | |
|---|---|---|---|---|
| | | | 1) Clearance of audit objection<br>2) Assent of Honorable Chancellor to the Draft amendment statute.<br>3) Receipt of the clarification from Department of Higher Education, Govt. of Karnataka regarding consideration of service under old pension scheme (sought under this office letter dated: 27.11.2021 and 27.02.2023).<br>The resolution is also subject to the financial rules, governing the pension of Karnataka State University employees and read along with rulings of various courts of law in the present and similar subject matter.<br>Further, to get post facto approval to the statute as per the UGC Guidelines of 2006 for change of nomenclature of the teaching posts i.e. Lecturer to Assistant Professor, Reader to Associate Professor, the Vice-Chancellor is authorised to constitute a committee to frame a draft statute in this regard.<br>Further his claim for encashment of earned leave during his past service in JSS College it was resolved to follow the directions received from the Principal Secretary, Higher Education Department, Bangalore under letter dtd: 24.06.2022/ Rules and Regulations as has been done in other similar cases of teaching faculty. | |

ಉಪ ಕುಲಸಚಿವರು

ಕುಲಸಚಿವರು